ದಾವಣಗೆರೆಯಿಂದ

ಮುಂಜಾನೆಯ ಮೆರಗು

ಸಂಪಾದಕ: ರವಿಕುಮಾರ ಜೆ.ಓ

MUNJANEYA MERAGU

ಕನ್ನಡ ದಿನಪತ್ರಿಕೆ

Editor : RAVIKUMARA J.O.

Kannada Daily

Davangere **Volume :**1 **Issue:** 87 Wednesday **23-09-2026 PRGI. NO. KNKAN/26/A4616,** Mob:- 8880222429 Page : 4 **Price :** 2-00/-

ದಾವಣಗೆರೆ ಸಂಪುಟ : 1 ಸಂಚಿಕೆ : 87 ಬುಧವಾರ **Email:** munjaneyameragu@gmail.com ಮೊ: 8880222429 ಪುಟ : 4 ಬೆಲೆ–ರೂ.2.00/–

ಮಳೆ ಕೈಕೊಟ್ಟಿತು; ಜಾನುವಾರುಗಳ ಪಾಲಾದ ಮೆಕ್ಕೆಜೋಳ

ಮೂರು ಎಕರೆ ಬೆಳೆ ಉಳಿಸಿಕೊಳ್ಳಲಾಗದೆ ಜಾನುವಾರುಗಳಿಗೆ ಮೇಯಲು ಬಿಟ್ಟ ರೈತ

“ಮುಂಜಾನೆಯ ಮೆರಗು”

ಜಗಳೂರು ಸೆ, 22– ಒಂದು ಕಡೆ ಆಕಾಶದತ್ತ ನೋಡುತ್ತಾ ಮಳೆಗಾಗಿ ಕಾದ ರೈತ... ಮತ್ತೊಂದೆಡೆ ಹೊಲದಲ್ಲಿ ಹಸಿರಾಗಬೇಕಿದ್ದ ಮೆಕ್ಕೆಜೋಳದ ಗಿಡಗಳು ಒಣಗಿ ನಿಂತಿವೆ. ಕೈಗೆ ಫಸಲು ಸಿಗುವ ನಿರೀಕ್ಷೆಯಲ್ಲಿ ತಿಂಗಳುಗಟ್ಟಲೆ ಕಾದಿದ್ದ ರೈತನ ಕನಸು ಇದೀಗ ಜಾನುವಾರುಗಳ ಮೇವಾಗಿ ಪರಿವರ್ತನೆಯಾಗಿದೆ. ಮಳೆ ಕೈಕೊಟ್ಟ ಪರಿಣಾಮ ಜಗಳೂರು ತಾಲೂಕಿನ ಕೃಷಿ ಬದುಕಿನ ಮೇಲೆ ಬರದ ಕರಾಳ ಛಾಯೆ ಆವರಿಸಿದೆ.

ತಾಲೂಕಿನ ಕಾನನಕಟ್ಟೆ ಸಮೀಪದ ರೈತನೊಬ್ಬ ಮೂರು ಎಕರೆ ಜಮೀನಿನಲ್ಲಿ ಮುಂಗಾರು ಹಂಗಾಮಿನಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಿದ್ದ. ಬಿತ್ತನೆ ಸಂದರ್ಭದಲ್ಲಿ ಉತ್ತಮ ಮಳೆಯ ನಿರೀಕ್ಷೆ ಇತ್ತು. ಆದರೆ ಬೆಳೆಗೆ ಕಾಳು ಕಟ್ಟುವ ನಿರ್ಣಾಯಕ ಹಂತದಲ್ಲಿ ಮಳೆ ಸಂಪೂರ್ಣವಾಗಿ ಕೈಕೊಟ್ಟ ಪರಿಣಾಮ ಮೆಕ್ಕೆಜೋಳದ ಗಿಡಗಳು ನೀರಿನ ಕೊರತೆಯಿಂದ ಒಣಗಿ ನಿಂತಿವೆ.

ಬೆಳೆ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾದ ಬಳಿಕ, ಮನನೊಂದ ರೈತ, ‘ನಾವು ತಿನ್ನುವ ಫಸಲು ಸಿಗದಿದ್ದರೂ ಜಾನುವಾರುಗಳಿಗಾದರೂ ಮೇವು ಆಗಲಿ’ ಎಂಬ ನೋವಿನಿಂದ ತನ್ನ ಜಾನುವಾರುಗಳನ್ನು ಹೊಲಕ್ಕೆ ಬಿಟ್ಟು ಒಣಗುತ್ತಿರುವ ಬೆಳೆಯನ್ನು



ಮೇಯಿಸುತ್ತಿರುವ ದೃಶ್ಯ ಕೃಷಿ ಸಂಕಷ್ಟದ ಜೀವಂತ ಚಿತ್ರಣವಾಗಿದೆ.

ಸಾಲ ಮಾಡಿ ಬಿತ್ತಿದ ಬೆಳೆ; ಕೈಗೆ ಬಂದದ್ದು ನಿರಾಸೆ

ಬೀಜ, ಗೊಬ್ಬರ, ಔಷಧಿ, ಉಳುಮೆ ಸೇರಿದಂತೆ ಕೃಷಿ ವೆಚ್ಚಕ್ಕಾಗಿ ಸಾಲ ಮಾಡಿಕೊಂಡು ಬಿತ್ತನೆ ಮಾಡಿದ್ದ ರೈತರಿಗೆ ಮಳೆ ಕೊರತೆ ಮತ್ತೊಂದು ಆರ್ಥಿಕ ಸಂಕಷ್ಟವನ್ನು ತಂದೊಡ್ಡಿದೆ.

ಮಳೆ ಉತ್ತಮವಾಗಿ ಬಂದಿದ್ದರೆ ಫಸಲು ಕೈ ಸೇರಿ ಸಾಲ ತೀರಿಸುವ ನಿರೀಕ್ಷೆಯಲ್ಲಿದ್ದ ರೈತರು, ಇದೀಗ ಬೆಳೆ ಕೈಕೊಟ್ಟರೆ ಸಾಲ ತೀರಿಸುವುದು ಹೇಗೆ? ಎಂಬ ಆತಂಕದಲ್ಲಿದ್ದಾರೆ. ಒಂದು ಹಂಗಾಮಿನ ಬೆಳೆ ನಷ್ಟವಾದರೆ ಅದರ ಪರಿಣಾಮ ಮುಂದಿನ ಹಂಗಾಮಿನ ಬಿತ್ತನೆಗೂ ತಟ್ಟುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

9 ಸಾವಿರ ಹೆಕ್ಟೇರ್ ಮೆಕ್ಕೆಜೋಳಕ್ಕೆ ಮಳೆ ಕೊರತೆಯ ಬಿಸಿ

ಜಗಳೂರು ತಾಲೂಕಿನ ಕಸಬಾ, ಬಿಳಿಚೋಡು ಹಾಗೂ ಸೊಕ್ಕೆ ಹೋಬಳಿ ವ್ಯಾಪ್ತಿಯಲ್ಲಿ ಸುಮಾರು 9 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಲಾಗಿದೆ. ಆದರೆ ಬೆಳೆ ನಿರ್ಣಾಯಕ ಹಂತದಲ್ಲಿದ್ದಾಗ ಮಳೆ ಕೊರತೆಯಾಗಿರುವುದರಿಂದ ಹಲವು ಪ್ರದೇಶಗಳಲ್ಲಿ ಬೆಳೆ ಒಣಗುವ ಹಂತ ತಲುಪಿದೆ.

ಮೆಕ್ಕೆಜೋಳ ಮಾತ್ರವಲ್ಲದೆ ಕೆಲವು ಗ್ರಾಮಗಳಲ್ಲಿ ರೈತರು ಬಿತ್ತನೆ ಮಾಡಿರುವ ರಾಗಿ ಹಾಗೂ ಶೇಂಗಾ ಬೆಳೆಗಳ ಮೇಲೂ ಮಳೆ ಕೊರತೆಯ ಪರಿಣಾಮ ಕಾಣಿಸಿಕೊಳ್ಳುತ್ತಿದೆ. ಮಣ್ಣಿನಲ್ಲಿದ್ದ ತೇವಾಂಶ ಕಡಿಮೆಯಾಗುತ್ತಿದ್ದು, ಮಳೆ ಬಾರದಿದ್ದರೆ ಉಳಿದಿರುವ ಬೆಳೆಗಳ ಸ್ಥಿತಿಯೂ ಗಂಭೀರವಾಗುವ ಆತಂಕ ರೈತರಲ್ಲಿದೆ.

ಹೊಲದಲ್ಲಿ ಬೆಳೆ ಇಲ್ಲ; ರೈತನ ಕಣ್ಣಲ್ಲಿ ಭವಿಷ್ಯದ ಚಿಂತೆ

ಸಾಮಾನ್ಯವಾಗಿ ಈ ಸಮಯದಲ್ಲಿ ಹೊಲಗಳಲ್ಲಿ ಹಸಿರಿನಿಂದ ಕಂಗೊಳಿಸಬೇಕಿದ್ದ ಮೆಕ್ಕೆಜೋಳದ ಗದ್ದೆಗಳು ಇದೀಗ ಒಣಗಿದ ಗಿಡಗಳಿಂದ ತುಂಬಿವೆ. ಕೆಲವೆಡೆ ರೈತರು ಬೆಳೆ ಉಳಿಸಲು ನೀರು ಹುಡುಕುತ್ತಿದ್ದಾರೆ. ನೀರಿನ ಸೌಲಭ್ಯವಿರುವವರು ಟ್ಯಾಂಕರ್ ಅಥವಾ ಇತರ ಮೂಲಗಳಿಂದ ನೀರು ಒದಗಿಸಲು ಪ್ರಯತ್ನಿಸುತ್ತಿದ್ದರೆ, ನೀರಿನ ಮೂಲವಿಲ್ಲದ ರೈತರು ಮಳೆಯನ್ನೇ ನಂಬಿಕೊಂಡಿದ್ದಾರೆ.

‘ಬೆಳೆ ಉಳಿಯುವುದಿಲ್ಲ ಎಂಬುದು ಗೊತ್ತಾದ ಮೇಲೆ ಜಾನುವಾರುಗಳಿಗೆ ಮೇವು ಆಗಲಿ ಎಂದು ಹೊಲಕ್ಕೆ ಬಿಟ್ಟಿದ್ದೇವೆ’ ಎನ್ನುವ ರೈತರ ನೋವು, ಜಗಳೂರಿನ ಕೃಷಿ ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

ಮಳೆಯ ಕೊರತೆ ಕೇವಲ ಬೆಳೆ ನಷ್ಟವಲ್ಲ

ಕೃಷಿ ನಷ್ಟ ಎಂದರೆ ಕೇವಲ ಹೊಲದಲ್ಲಿನ ಬೆಳೆ ಒಣಗುವುದಲ್ಲ. ಬೆಳೆಗಾಗಿ ಮಾಡಿರುವ ಸಾಲ, ಕುಟುಂಬದ ಖರ್ಚು, ಮುಂದಿನ ಹಂಗಾಮಿನ ಬಿತ್ತನೆ ವೆಚ್ಚ, ಜಾನುವಾರುಗಳ ಮೇವು ಹಾಗೂ ಗ್ರಾಮೀಣ ಆರ್ಥಿಕ ಚಟುವಟಿಕೆಗಳ ಮೇಲೂ ಇದರ ಪರಿಣಾಮ ಬೀಳುತ್ತದೆ. ರೈತ ಬೆಳೆದ ಬೆಳೆಗೆ ಬೆಲೆ



ಸಿಗದಿದ್ದಾಗಲೂ ಸಂಕಷ್ಟ; ಬೆಳೆ ಬರುವ ಮುನ್ನವೇ ಮಳೆ ಕೈಕೊಟ್ಟಾಗಲೂ ಸಂಕಷ್ಟ. ಹೀಗಾಗಿ ಮಳೆ ಕೊರತೆ ಮತ್ತು ಬೆಳೆ ನಷ್ಟದ ವಾಸ್ತವಿಕತೆಯನ್ನು ಕೇವಲ ಅಂಕಿ–ಅಂಶಗಳಲ್ಲಿ ನೋಡುವುದಕ್ಕಿಂತ ಹೊಲಮಟ್ಟದಲ್ಲಿ ಪರಿಶೀಲಿಸುವ ಅಗತ್ಯವಿದೆ.

ಬೆಳೆ ಸಮೀಕ್ಷೆ–ಪರಿಹಾರಕ್ಕೆ ಆಗ್ರಹ

ಮಳೆ ಕೊರತೆಯಿಂದ ಹಾನಿಗೊಳಗಾಗಿರುವ ಗ್ರಾಮಗಳಲ್ಲಿ ಕೃಷಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಬೆಳೆ ಪರಿಸ್ಥಿತಿಯ ಸಮಗ್ರ ಸಮೀಕ್ಷೆ ನಡೆಸಬೇಕು ಎಂಬುದು ರೈತರ ಪ್ರಮುಖ ನಿರೀಕ್ಷೆಯಾಗಿದೆ.

ಮೆಕ್ಕೆಜೋಳ, ರಾಗಿ, ಶೇಂಗಾ ಸೇರಿದಂತೆ ವಿವಿಧ ಬೆಳೆಗಳ ಹಾನಿಯನ್ನು ಗ್ರಾಮವಾರು ದಾಖಲಿಸಿ, ಅರ್ಹ ರೈತರಿಗೆ ಬೆಳೆ ವಿಮೆ ಹಾಗೂ ಸರ್ಕಾರದ ನಿಯಮಾನುಸಾರ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳಬೇಕಿದೆ.

ಮೂರು ಎಕರೆ ಮೆಕ್ಕೆಜೋಳವನ್ನು ಜಾನುವಾರುಗಳಿಗೆ ಮೇಯಲು ಬಿಡುತ್ತಿರುವ ರೈತನ ದೃಶ್ಯ ಕೇವಲ ಒಂದು ಕುಟುಂಬದ ನೋವಲ್ಲ; ಮಳೆ ಕೊರತೆಯಿಂದ ಜಗಳೂರಿನ ಕೃಷಿ ಬದುಕು ಎದುರಿಸುತ್ತಿರುವ ಸಂಕಷ್ಟದ ಸಂಕೇತವಾಗಿದೆ.

ಆಕಾಶದತ್ತ ಮುಖ ಮಾಡಿ ಮಳೆಯ ನಿರೀಕ್ಷೆಯಲ್ಲಿರುವ ರೈತನಿಗೆ ಈ ಬಾರಿ ಮಳೆ ಮಾತ್ರವಲ್ಲ, ಸರ್ಕಾರದ ಸಮಯೋಚಿತ ನೆರವು ಕೂಡ ಅಗತ್ಯವಾಗಿದೆ.

ಶಾಸಕರ ಅವಿರತ ಶ್ರಮದ ಫಲ: ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಶೀರ್ ಅಹಮದ್



“ಮುಂಜಾನೆಯ ಮೆರಗು”

ಜಗಳೂರು, ಸೆ.22– ಜಗಳೂರು ತಾಲೂಕು ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರ್ಪಡೆಯಾಗಿರುವ ಹಿನ್ನೆಲೆಯಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದ ಗಾಂಧಿ ವೃತ್ತದಲ್ಲಿ ಮಂಗಳವಾರ ರಾತ್ರಿ ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಶೀರ್ ಅಹಮದ್ ಮಾತನಾಡಿ, ಶಾಸಕ ಬಿ.ದೇವೇಂದ್ರಪ್ಪ ಅವರ ಅವಿರತ ಪ್ರಯತ್ನ ಹಾಗೂ ಸರ್ಕಾರದ ಮಟ್ಟದಲ್ಲಿ ನಡೆಸಿದ ನಿರಂತರ ಪ್ರಯತ್ನದ ಫಲವಾಗಿ ಜಗಳೂರು ತಾಲೂಕು ಬರಪೀಡಿತ ಪಟ್ಟಿಗೆ ಸೇರ್ಪಡೆಯಾಗಿದೆ ಎಂದು ಹೇಳಿದರು.

ಜಗಳೂರು ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸುವ ವಿಚಾರದಲ್ಲಿ ವಿರೋಧ ಪಕ್ಷದವರು ಹಲವು ಆರೋಪಗಳನ್ನು ಮಾಡುತ್ತಿದ್ದರು. ಆದರೆ ಶಾಸಕರು ಆರೋಪಗಳಿಗೆ ಪ್ರತಿಕ್ರಿಯಿಸುವ ಬದಲು ಕೆಲಸದ ಮೂಲಕ ಉತ್ತರ ನೀಡಿದ್ದಾರೆ. ರೈತರ ಹಿತದೃಷ್ಟಿಯಿಂದ ನಿರಂತರವಾಗಿ ಪ್ರಯತ್ನ ನಡೆಸಿ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಅವರು ತಿಳಿಸಿದರು.

ಬರಪೀಡಿತ ತಾಲೂಕು ಘೋಷಣೆಯಿಂದ ರೈತರಿಗೆ ಸರ್ಕಾರದ ನಿಯಮಾನುಸಾರ ದೊರೆಯುವ ಪರಿಹಾರ ಹಾಗೂ ಇತರೆ ಸೌಲಭ್ಯಗಳು ಸಿಗುವ ನಿರೀಕ್ಷೆ ಮೂಡಿದೆ. ಸರ್ಕಾರದ ನೆರವು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಕಾರ್ಯಕರ್ತರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ವಿವಿಧ ಘಟಕಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಜಗಳೂರು ಬರಪೀಡಿತ ಪಟ್ಟಿಗೆ ಸೇರ್ಪಡೆ

ಮೊದಲ ಪಟ್ಟಿಯಲ್ಲೇ ತಾಲೂಕು ಕೈಬಿಟ್ಟಿದ್ದಕ್ಕೆ ಶಾಸಕ ದೇವೇಂದ್ರಪ್ಪ ಅಸಮಾಧಾನಕ್ಕೆ ಮಣಿದ ಸರ್ಕಾರ

“ಮುಂಜಾನೆಯ ಮೆರಗು”

ಜಗಳೂರು, ಸೆ.22– ಮಳೆ ಕೊರತೆ, ಒಣಗುತ್ತಿರುವ ಬೆಳೆ, ಕುಡಿಯುವ ನೀರಿನ ಸಮಸ್ಯೆ ಹಾಗೂ ರೈತರ ಸಂಕಷ್ಟದ ನಡುವೆಯೇ ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಜಗಳೂರು ಹೊರಗುಳಿದಿದ್ದ ವಿಚಾರಕ್ಕೆ ಕೊನೆಗೂ ತೆರೆ ಬಿದ್ದಿದೆ. ರಾಜ್ಯ ಸರ್ಕಾರ ನಾಲ್ಕನೇ ಹಂತದ ಗ್ರೌಂಡ್‌ಟ್ರೂತ್ ವರದಿಯ ಆಧಾರದ ಮೇಲೆ ಜಗಳೂರು ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆಗೊಳಿಸಿ ಅಧಿಕೃತ ಆದೇಶ ಹೊರಡಿಸಿದೆ.

ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸದಿರುವುದನ್ನು ವಿರೋಧಿಸಿ ಕಳೆದ ಹಲವು ದಿನಗಳಿಂದ ರೈತ ಸಂಘಟನೆಗಳು, ವಿವಿಧ ವಿರೋಧ ಪಕ್ಷಗಳು ಹಾಗೂ ರೈತಪರ ಸಂಘಟನೆಗಳು ಹೋರಾಟ, ಪ್ರತಿಭಟನೆ, ಬಂದ್ ಸೇರಿದಂತೆ ಹಲವು ರೀತಿಯ ಹೋರಾಟಗಳನ್ನು ನಡೆಸಿದ್ದವು. ಬರದ ತೀವ್ರತೆಯನ್ನು ಸರ್ಕಾರದ ಗಮನಕ್ಕೆ ತಂದು ತಾಲೂಕಿಗೆ ಪರಿಹಾರ ಸೌಲಭ್ಯ ಕಲ್ಪಿಸಬೇಕು ಎಂಬುದು ಹೋರಾಟಗಾರರ ಪ್ರಮುಖ ಬೇಡಿಕೆಯಾಗಿತ್ತು.

ಆದರೆ ಈ ಹೋರಾಟಗಳು ತೀವ್ರಗೊಳ್ಳುವುದಕ್ಕೂ ಮುನ್ನವೇ ಶಾಸಕ ಬಿ. ದೇವೇಂದ್ರಪ್ಪ ಅವರು ಜಗಳೂರು ತಾಲೂಕು ಮೊದಲ ಹಂತದ ಬರಪೀಡಿತ



ಪಟ್ಟಿಯಲ್ಲಿ ಸೇರ್ಪಡೆಯಾಗದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದರು. ಸ್ವಪಕ್ಷದ ಸರ್ಕಾರದ ಸಚಿವರ ವಿರುದ್ಧವೇ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದ ಶಾಸಕರು, ಜಗಳೂರಿನ ವಾಸ್ತವ ಪರಿಸ್ಥಿತಿಯನ್ನು ಪರಿಗಣಿಸಿ ತಾಲೂಕನ್ನು ಬರಪೀಡಿತ ಪಟ್ಟಿಗೆ ಸೇರಿಸಬೇಕೆಂದು ಒತ್ತಾಯಿಸಿದ್ದರು.

20ಕ್ಕೂ ಅಧಿಕ ದಿನ ನಿರಂತರ ಪ್ರಯತ್ನ

ತಾಲೂಕಿನಲ್ಲಿ ಮಳೆ ಕೊರತೆಯಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳು, ಒಣಗುತ್ತಿರುವ ಬೆಳೆಗಳು, ಕುಡಿಯುವ ನೀರಿನ ಅಭಾವ ಸೇರಿದಂತೆ ಜಗಳೂರಿನ ಬರದ ವಾಸ್ತವ ಸ್ಥಿತಿಯನ್ನು ಸರ್ಕಾರದ

ಮುಂದಿನ ಸವಾಲು: ಪಟ್ಟಿಗೆ ಸೇರ್ಪಡೆಯಷ್ಟೇ ಸಾಕೇ?

ಬರಪೀಡಿತ ಪಟ್ಟಿಗೆ ಜಗಳೂರು ಸೇರ್ಪಡೆಯಾಗಿರುವುದು ರೈತರಿಗೆ ಒಂದು ಹಂತದ ನಿರಾಳತೆ ನೀಡಿದೆ. ಆದರೆ ಪಟ್ಟಿಗೆ ಸೇರ್ಪಡೆಯಾದ ನಂತರ ಸರ್ಕಾರ ಕೈಗೊಳ್ಳುವ ಕ್ರಮಗಳೇ ನಿರ್ಣಾಯಕ. ಬೆಳೆ ನಷ್ಟದ ನಿಖರ ಅಂದಾಜು, ಅರ್ಹ ರೈತರಿಗೆ ಪರಿಹಾರ, ಜಾನುವಾರುಗಳಿಗೆ ಮೇವು, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮುಂದಿನ ಹಂಗಾಮಿಗೆ ಅಗತ್ಯ ನೆರವು ತ್ವರಿತವಾಗಿ ದೊರೆಯಬೇಕೆಂಬುದು ರೈತರ ನಿರೀಕ್ಷೆಯಾಗಿದೆ.

ಗಮನಕ್ಕೆ ತರುವ ನಿಟ್ಟಿನಲ್ಲಿ ಶಾಸಕ ದೇವೇಂದ್ರಪ್ಪ ಅವರು ನಿರಂತರವಾಗಿ ಪ್ರಯತ್ನ ನಡೆಸಿದರು.

ಕಳೆದ 20ಕ್ಕೂ ಅಧಿಕ ದಿನಗಳ ಕಾಲ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಚಿವರನ್ನು ಭೇಟಿ ಮಾಡಿ ಜಗಳೂರಿನ ಪರಿಸ್ಥಿತಿಯನ್ನು ವಿವರಿಸಿ, ಸ್ಥಳೀಯ ವಾಸ್ತವಾಂಶಗಳ ಆಧಾರದ ಮೇಲೆ ಬರಪೀಡಿತ ತಾಲೂಕು ಎಂದು ಘೋಷಿಸುವಂತೆ ಒತ್ತಾಯಿಸಿದರು.

ಬರದ ಪಟ್ಟಿಯಲ್ಲಿ ತಾಲೂಕು ಸೇರ್ಪಡೆಯಾಗದಿದ್ದರೆ ರೈತರಿಗೆ ಸರ್ಕಾರದಿಂದ ದೊರೆಯಬೇಕಾದ ಹಲವು ಪರಿಹಾರ ಹಾಗೂ ಬರ ನಿರ್ವಹಣಾ ಸೌಲಭ್ಯಗಳಿಂದ ವಂಚಿತರಾಗುವ ಸಾಧ್ಯತೆ ಇರುವುದರಿಂದ, ಯಾವುದೇ ಕಾರಣಕ್ಕೂ ಜಗಳೂರನ್ನು ಪಟ್ಟಿಯಿಂದ ಹೊರಗಿಡಬಾರದು ಎಂಬ ನಿಲುವನ್ನು ಶಾಸಕರು ಸರ್ಕಾರದ ಮುಂದೆ ಪ್ರತಿಪಾದಿಸಿದ್ದರು.

‘ಸೇರ್ಪಡೆಯಾಗದಿದ್ದರೆ ರಾಜೀನಾಮೆ’ ಸವಾಲು

ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಜಗಳೂರು ಸೇರ್ಪಡೆಯಾಗದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಸವಾಲನ್ನೇ ಸರ್ಕಾರದ ಮುಂದಿಟ್ಟಿದ್ದೇನೆ ಎಂದು ಶಾಸಕ ದೇವೇಂದ್ರಪ್ಪ ಹೇಳಿಕೆ ನೀಡಿದ್ದ ಬೆಳವಣಿಗೆಯೂ ತಾಲೂಕಿನಲ್ಲಿ ರಾಜಕೀಯವಾಗಿ ಗಮನ ಸೆಳೆದಿತ್ತು.

ಶಾಸಕರ ಈ ಹೇಳಿಕೆ ನಂತರ ಬರದ ವಿಚಾರ ಮತ್ತಷ್ಟು ಚರ್ಚೆಗೆ ಗ್ರಾಸವಾಯಿತು. ಒಂದು ಕಡೆ ರೈತ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳು ಹೋರಾಟದ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರಿದರೆ, ಮತ್ತೊಂದೆಡೆ ಶಾಸಕರು ಸರ್ಕಾರದ ಒಳಗಡೆಯೇ ಜಗಳೂರಿನ ಪರವಾಗಿ ಒತ್ತಡ ಮುಂದುವರಿಸಿದ್ದರು.

ಬಾಲ್ಯದಲ್ಲಿಯೇ ಮಕ್ಕಳಿಗೆ ಗ್ರಂಥಾಲಯದ ಪರಿಚಯ ಮಾಡಿಸಿ: ಗ್ರಂಥಾಲಯ ಸಹಾಯಕ ಎಚ್.ಪಿ. ಶರಣಪ್ಪ

“ಮುಂಜಾನೆಯ ಮೆರಗು”

ಜಗಳೂರು ಸೆ, 22– ಬಾಲ್ಯದಲ್ಲಿಯೇ ಮಕ್ಕಳಿಗೆ ಗ್ರಂಥಾಲಯದ ಪರಿಚಯ ಮಾಡಿಸುವುದರಿಂದ ಓದುವ ಹಾಗೂ ಕಲಿಯುವ ಆಸಕ್ತಿ ಬೆಳೆಸಲು ಸಾಧ್ಯವಾಗುತ್ತದೆ ಎಂದು ಗ್ರಂಥಾಲಯ ಸಹಾಯಕ ಎಚ್.ಪಿ. ಶರಣಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಮಕ್ಕಳ ಗ್ರಂಥಾಲಯದಲ್ಲಿ ಮಂಗಳವಾರ ಜೆ.ಎಂ. ಇಮಾಮ್ ಮೆಮೊರಿಯಲ್ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ ಎಲ್‌ಕೆಜಿ ಮತ್ತು ಯು–ಕೆಜಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ‘ಗ್ರಂಥಾಲಯ ಪರಿಚಯ’ ಎಂಬ ವಿನೂತನ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಗ್ರಂಥಾಲಯದ ಬಳಕೆ, ಪುಸ್ತಕಗಳ ಮಹತ್ವ ಹಾಗೂ ಓದುವ ಹವ್ಯಾಸದ ಕುರಿತು ಮಾಹಿತಿ ನೀಡಿ ಅವರು ಮಾತನಾಡಿದರು.

ಚಿಕ್ಕ ಮಕ್ಕಳಿಗೆ ಆರಂಭದಲ್ಲೇ ಗ್ರಂಥಾಲಯ ಎಂದರೇನು, ಪುಸ್ತಕಗಳನ್ನು ಹೇಗೆ ಬಳಸಬೇಕು ಹಾಗೂ ಪುಸ್ತಕ ಓದುವುದರಿಂದ ಏನೆಲ್ಲ ಪ್ರಯೋಜನಗಳಿವೆ ಎಂಬ ಅರಿವು ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಕ್ಕಳನ್ನು ಆಕರ್ಷಿಸುವ ರೀತಿಯಲ್ಲಿ ಗ್ರಂಥಾಲಯವನ್ನು ಪರಿಚಯಿಸುವ ಅಗತ್ಯವಿದೆ. ಮಕ್ಕಳ ಗ್ರಂಥಾಲಯದಲ್ಲಿ ಪುಸ್ತಕಗಳ ಜತೆಗೆ ವಿವಿಧ ಆಟಿಕೆಗಳನ್ನು ಇರಿಸಲಾಗಿದ್ದು, ಆಟವಾಡುತ್ತಲೇ ಪುಸ್ತಕಗಳತ್ತ ಮಕ್ಕಳ ಗಮನ ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಕ್ಕಳು ಆಟಿಕೆಗಳೊಂದಿಗೆ ಆಟವಾಡಿದ ನಂತರ ಅಲ್ಲಿರುವ ಬಣ್ಣಬಣ್ಣದ ಚಿತ್ರಗಳಿರುವ ಪುಸ್ತಕಗಳನ್ನು ಕುತೂಹಲದಿಂದ ವೀಕ್ಷಿಸುತ್ತಾರೆ. ಪುಸ್ತಕದೊಳಗೆ ಏನಿದೆ, ಚಿತ್ರಗಳು ಏನನ್ನು ಹೇಳುತ್ತವೆ ಎಂಬುದನ್ನು ತಿಳಿದುಕೊಳ್ಳುವ ಆಸಕ್ತಿ ಅವರಲ್ಲಿ ಮೂಡುತ್ತದೆ. ಇಂತಹ ಕುತೂಹಲವೇ ಮುಂದಿನ ದಿನಗಳಲ್ಲಿ ಓದುವ ಹವ್ಯಾಸವಾಗಿ ರೂಪುಗೊಳ್ಳಲು ಸಹಕಾರಿಯಾಗುತ್ತದೆ ಎಂದರು.



ಮಕ್ಕಳ ಗಮನ ಸೆಳೆಯುವ ಉದ್ದೇಶದಿಂದ ಗ್ರಂಥಾಲಯದಲ್ಲಿ ವಿವಿಧ ಶೈಕ್ಷಣಿಕ ಚಾರ್ಟ್‌ಗಳು, ಚಿತ್ರಗಳು, ಕಥಾ ಪುಸ್ತಕಗಳು ಹಾಗೂ ಮಕ್ಕಳಿಗೆ ಆಸಕ್ತಿದಾಯಕವಾದ ಕಲಿಕಾ ಸಾಮಗ್ರಿಗಳನ್ನು ಅಳವಡಿಸಲಾಗಿದೆ. ಪುಸ್ತಕವನ್ನು ಕೇವಲ ಓದುವ ವಸ್ತುವಾಗಿ ನೋಡದೆ, ಆಟ, ಚಿತ್ರ, ಕಥೆ ಹಾಗೂ ಚಟುವಟಿಕೆಗಳ ಮೂಲಕ ಮಕ್ಕಳ ಕಲಿಕೆಗೆ ಪೂರಕವಾಗುವ ವಾತಾವರಣವನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಮೊಬೈಲ್‌ಗಿಂತ ಪುಸ್ತಕದತ್ತ ಮಕ್ಕಳ ಗಮನ

ಇಂದಿನ ದಿನಗಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು ಮೊಬೈಲ್ ಫೋನ್ ಹಾಗೂ ವಿವಿಧ ಡಿಜಿಟಲ್ ಸಾಧನಗಳ ಬಳಕೆಗೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

101 ಬರಪೀಡಿತ ತಾಲೂಕುಗಳಲ್ಲಿ ಸುಮಾರು 18 ಸಾವಿರ ಕೋಟಿ ನಷ್ಟ : ಸಚಿವ ಪರಮೇಶ್ವರ್

"ಮುಂಜಾನೆಯ ಮೆರಗು"

ಬೆಂಗಳೂರು,ಸೆ.22– ರಾಜ್ಯದಲ್ಲಿ ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಬರದ ವ್ಯಾಪ್ತಿ ದಿನದಿಂದ ದಿನಕ್ಕೆ ವಿಸ್ತರಿಸುತ್ತಿದ್ದು, ಈಗಾಗಲೇ ಮೊದಲ ಹಂತದಲ್ಲಿ ಘೋಷಿಸಿರುವ 101 ಬರಪೀಡಿತ ತಾಲೂಕುಗಳಲ್ಲಿ ಸುಮಾರು 18 ಸಾವಿರ ಕೋಟಿ ನಷ್ಟ ಸಂಭವಿಸಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ.ಜಿ.ಪರಮೇಶ್ವರ್ ವಿಧಾನ ಪರಿಷತ್‌ನಲ್ಲಿ ತಿಳಿಸಿದ್ದಾರೆ.

ಇದೇ ವೇಳೆ ಹಂತ ಹಂತವಾಗಿ ಮತ್ತಷ್ಟು ತಾಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡುವ ಪ್ರಕ್ರಿಯೆ ಮುಂದುವರಿದಿದ್ದು, ಇಂದು 53 ತಾಲೂಕುಗಳನ್ನು ಹೆಚ್ಚುವರಿಯಾಗಿ ಘೋಷಿಸುವುದಾಗಿ ಸರ್ಕಾರ ತಿಳಿಸಿದೆ. ಇದರಿಂದ ಒಟ್ಟು ಬರಪೀಡಿತ ತಾಲೂಕುಗಳ ಸಂಖ್ಯೆ ಸುಮಾರು 177ಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ.

ವಿಧಾನಮಂಡಲದ ವಿಶೇಷ ಅಧಿವೇಶನದ ಅಂಗವಾಗಿ ನಡೆದ ಚರ್ಚೆಯಲ್ಲಿ ಬರ ಪರಿಸ್ಥಿತಿ ಕುರಿತು ಮಾಹಿತಿ ನೀಡಿದ ಪರಮೇಶ್ವರ್, ಬರಪೀಡಿತ ತಾಲೂಕುಗಳ ಘೋಷಣೆಯನ್ನು ರಾಜಕೀಯ ಒತ್ತಡ ಅಥವಾ ಯಾವುದೇ ವ್ಯಕ್ತಿಯ ರಾಜೀನಾಮೆ ಬೆದರಿಕೆಯನ್ನು ಆಧರಿಸಿ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರ್ಕಾರದ 2020ರ ಬರ ನಿರ್ವಹಣಾ ಕೈಪಿಡಿಯಲ್ಲಿ ನಿಗದಿಪಡಿಸಿರುವ ಮಾನದಂಡಗಳು, ಮಳೆ ಕೊರತೆ, ಒಣಹವೆಯ ಅವಧಿ, ಬಿತ್ತನೆ ಪ್ರಮಾಣ, ಬೆಳೆ ಪರಿಸ್ಥಿತಿ, ಮಣ್ಣಿನ ತೇವಾಂಶ, ಅಂತರ್ಜಲ ಹಾಗೂ ಜಲಾಶಯಗಳ ನೀರಿನ ಲಭ್ಯತೆ ಸೇರಿದಂತೆ ವೈಜ್ಞಾನಿಕ ಅಂಶಗಳ ಆಧಾರದ ಮೇಲೆಯೇ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುತ್ತಿದೆ ಎಂದು ಹೇಳಿದರು.

101ರಿಂದ 124, ಇದೀಗ 177ರತ್ತ :

ಆಗಸ್ಟ್‌ನಲ್ಲಿ ಮೊದಲ ಹಂತದಲ್ಲಿ 101 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿತ್ತು. ಅವುಗಳಲ್ಲಿ 89 ತಾಲೂಕುಗಳು ತೀವ್ರ ಬರಪೀಡಿತ ಹಾಗೂ 12 ತಾಲೂಕುಗಳು ಮಧ್ಯಮ ಬರಪೀಡಿತ ಎಂದು ವರ್ಗೀಕರಿಸಲಾಗಿತ್ತು.



ಬಳಿಕ ಸೆಪ್ಟೆಂಬರ್‌ನಲ್ಲಿ ಮತ್ತೊಂದು 23 ತಾಲ್ಲೂಕುಗಳನ್ನು ಸೇರಿಸಲಾಗಿದ್ದು, ಒಟ್ಟು ಸಂಖ್ಯೆ 124ಕ್ಕೆ ಏರಿದೆ. ಈ 23 ತಾಲ್ಲೂಕುಗಳ ಪೈಕಿ 21 ತೀವ್ರ ಹಾಗೂ ಎರಡು ಮಧ್ಯಮ ಬರಪೀಡಿತ ತಾಲ್ಲೂಕುಗಳಾಗಿವೆ.

ಇದೀಗ ಮೂರನೇ ಹಂತದ ಪರಿಶೀಲನೆ ಬಳಿಕ ಮತ್ತಷ್ಟು ತಾಲ್ಲೂಕುಗಳನ್ನು ಪಟ್ಟಿಗೆ ಸೇರಿಸುವುದಾಗಿ ಸರ್ಕಾರ ತಿಳಿಸಿದೆ. ಸೆಪ್ಟೆಂಬರ್ 20ರ ವೇಳೆಗೆ ಪರಮೇಶ್ವರ್ ಅವರು ರಾಜ್ಯದಲ್ಲಿ 200ಕ್ಕೂ ಹೆಚ್ಚು ತಾಲ್ಲೂಕುಗಳು ಅಂತಿಮವಾಗಿ ಬರಪೀಡಿತ ಪಟ್ಟಿಗೆ ಸೇರುವ ಸಾಧ್ಯತೆ ಇದೆ ಎಂದು ಹೇಳಿದ್ದರು. ಹೀಗಾಗಿ ಇಂದಿನ ಘೋಷಣೆ ಅಂತಿಮ ಪಟ್ಟಿಯಾಗದೆ, ಬರದ ಪರಿಸ್ಥಿತಿಯ ಆಧಾರದ ಮೇಲೆ ಮುಂದಿನ ಹಂತಗಳಲ್ಲೂ ಪರಿಶೀಲನೆ ಮುಂದುವರಿಯುವ ಸಾಧ್ಯತೆ ಇದೆ.

18 ಸಾವಿರ ಕೋಟಿ ನಷ್ಟದ ವರದಿ :

ಮೊದಲ ಹಂತದಲ್ಲಿ ಬರಪೀಡಿತ ಎಂದು ಗುರುತಿಸಲಾದ 101 ತಾಲ್ಲೂಕುಗಳಲ್ಲಿ ಬೆಳೆ ಹಾಗೂ ಸಂಬಂಧಿತ ಆರ್ಥಿಕ ನಷ್ಟವನ್ನು ಸುಮಾರು 18 ಸಾವಿರ ಕೋಟಿ ಎಂದು ಅಂದಾಜಿಸಲಾಗಿದೆ. ಈ ಆಧಾರದ ಮೇಲೆ ಕೇಂದ್ರದಿಂದ ಸುಮಾರು 3,500 ಕೋಟಿ ಪರಿಹಾರ ಕೋರಿ ರಾಜ್ಯ ಸರ್ಕಾರ ಮನವಿ ಸಲ್ಲಿಸಿದೆ. ಮುಂದಿನ ಹಂತಗಳಲ್ಲಿ ಸೇರ್ಪಡೆಯಾಗುವ ತಾಲೂಕುಗಳ ನಷ್ಟದ ವಿವರಗಳನ್ನು ಒಳಗೊಂಡಂತೆ ಹೆಚ್ಚುವರಿ ಮನವಿಗಳನ್ನು ಸಲ್ಲಿಸುವುದಾಗಿ ಸರ್ಕಾರ ಈಗಾಗಲೇ ತಿಳಿಸಿದೆ.

ಹಿಂದಿನ ಬರದ ಸಂದರ್ಭದಲ್ಲೂ ಕರ್ನಾಟಕವು ದೊಡ್ಡ ಪ್ರಮಾಣದ ಪರಿಹಾರಕ್ಕೆ ಮನವಿ ಸಲ್ಲಿಸಿತ್ತು. ಆದರೆ ನಿರೀಕ್ಷಿತ ಪ್ರಮಾಣದ ನೆರವು ದೊರೆಯಲಿಲ್ಲ ಎಂದು ಪರಮೇಶ್ವರ್ ವಿಧಾನ ಪರಿಷತ್‌ನಲ್ಲಿ ನೆನಪಿಸಿದರು. ಹಿಂದಿನ ಬಾರಿ ರಾಜ್ಯವು ಸುಮಾರು 39 ಸಾವಿರ ಕೋಟಿ ನಷ್ಟವಾಗಿದೆ ಎಂದು ಅಂದಾಜಿಸಿ 18 ಸಾವಿರ ಕೋಟಿ ರೂ. ಪರಿಹಾರ ಕೇಳಿದ್ದರೂ, ಸುಮಾರು 3,400, 3,500 ಕೋಟಿ ರೂ. ಮಾತ್ರ ದೊರೆತಿತ್ತು ಎಂದು ಸರ್ಕಾರದ ಹೇಳಿಕೆಗಳನ್ನು ವರದಿಗಳು ದಾಖಲಿಸಿವೆ.

ರಾಜೀನಾಮೆ ಬೆದರಿಕೆಗೆ ತಾಲೂಕು ಘೋಷಣೆ ಸಾಧ್ಯವಿಲ್ಲ :

ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಗದಗ ಸೇರಿಸಲಾಯಿತೇ ಎಂಬ ಪ್ರಶ್ನೆಯನ್ನು ಬಿಜೆಪಿ ಸದಸ್ಯ ಸಿ.ಟಿ.ರವಿ ಎತ್ತಿದರು. ಹೊಸ ಪಟ್ಟಿಯಲ್ಲಿ ಗದಗವೂ ಸೇರುವುದಾಗಿ ಪರಮೇಶ್ವರ್ ಉತ್ತರಿಸಿದರು. ಇದೇ ವೇಳೆ, ಕೆಲವರು ತಮ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸದಿದ್ದರೆ ರಾಜೀನಾಮೆ ನೀಡುವುದಾಗಿ ಹೇಳುತ್ತಿರುವ ಹಿನ್ನೆಲೆಯಲ್ಲಿ, ರಾಜೀನಾಮೆ ಒತ್ತಡಕ್ಕೆ ಮಣಿದು ಬರ ಘೋಷಣೆ ಮಾಡಲು ಸಾಧ್ಯವಿಲ್ಲ ಎಂದು ಪರಮೇಶ್ವರ್ ಸ್ಪಷ್ಟಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿ.ಟಿ.ರವಿ, ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಿಸಲು ಸರ್ಕಾರವೇ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಪಾದಿಸಿದರು. ಕೇಂದ್ರದಿಂದ ಪರಿಹಾರ ಕೇಳುವ ವಿಚಾರದಲ್ಲೂ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಗ್ವಾದ ನಡೆಯಿತು.

150 ಕೋಟಿ ರೂ ವೆಚ್ಚದಲ್ಲಿ 7 ಜಿಲ್ಲೆಗಳ 500 ಕೆರೆ ಪುನಶ್ಚೇತನಕ್ಕೆ ಸಚಿವ ಈಶ್ವರ ಖಂಡ್ರೆ ಸೂಚನೆ

"ಮುಂಜಾನೆಯ ಮೆರಗು"

ಬೆಂಗಳೂರು, ಸೆ.22– ರಾಜ್ಯದ 7 ಜಿಲ್ಲೆಗಳ 500 ಕೆರೆಗಳ ಪುನಶ್ಚೇತನಕ್ಕೆ ವಿಶ್ವಬ್ಯಾಂಕ್ ನೆರವಿನಡಿ 150 ಕೋಟಿ ರೂ. ಸಮಗ್ರ ಯೋಜನಾ ವರದಿ ಸಿದ್ಧವಾಗಿದ್ದು, ಸಮರೋಪಾದಿಯಲ್ಲಿ ಕೆರೆ ಅಭಿವೃದ್ಧಿ ಮಾಡುವಂತೆ ಸಂಬಂಧಿತ ಸಿಇಓಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದರು.

ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ವಿಕಾಸಸೌಧದ ತಮ ಕಚೇರಿಯಲ್ಲಿ ಎಲ್ಲ ಜಿಲ್ಲೆಗಳ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಅವರು, ಬೆಂಗಳೂರು ನಗರ, ಗ್ರಾಮಾಂತರದ 135 ಕೆರೆಗಳಿಗೂ ಬರಲಿದೆ ಜೀವಕಳೆ ಬರಲಿದೆ. 7 ಜಿಲ್ಲೆಗಳ 500 ಕೆರೆ ಪುನಶ್ಚೇತನಕ್ಕೆ 150 ಕೋಟಿ ರೂ. ಸಮಗ್ರ ಯೋಜನಾ ವರದಿ ಸಿದ್ಧವಾಗಿದೆ ಎಂದರು.

ವಿಶ್ವಬ್ಯಾಂಕ್ ಯೋಜನೆಯಡಿ ಬೆಂಗಳೂರು ಗ್ರಾಮಾಂತರ –68, ಬೆಂಗಳೂರು ನಗರ –67, ಬೀದರ್–44,



ಚಿಕ್ಕಬಳ್ಳಾಪುರ –90, ಕಲ್ಬುರ್ಗಿ–49, ತುಮಕೂರು –96 ಮತ್ತು ಕೋಲಾರ ಜಿಲ್ಲೆಯ–86 ಕೆರೆಗಳ ಪುನಶ್ಚೇತನಕ್ಕೆ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಎಲ್ಲ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಪೂರೈಕೆ ಆಗುತ್ತಿರುವುದನ್ನು ಸಿಇಓಗಳು ಮತ್ತು ಪಿಡಿಓಗಳು ಖಚಿತಪಡಿಸಿಕೊಳ್ಳಬೇಕು. ನಿಯಮಿತವಾಗಿ ನೀರಿನ ಪರೀಕ್ಷೆ ಮಾಡಬೇಕು. ಕಲುಷಿತ ನೀರಿನ ದೂರು ಬಂದರೆ ಕೂಡಲೇ ಜಲ ಮೂಲದಿಂದ ಹಿಡಿದು ಮನೆಯ ನಲ್ಲಿಯವರೆಗೆ ಪ್ರತಿಯೊಂದು ಹಂತದಲ್ಲೂ ಪರಿಶೀಲನೆ ನಡೆಸಿ, ತ್ವಾಜ್ಯ ನೀರು ಸೇರದಂತೆ ಕ್ರಮವಹಿಸಬೇಕು ಎಂದು ಸೂಚಿಸಿದರು.

ಬೆಂಗಳೂರು, ಬೆಳವಾವಿ, ಉತ್ತರ ಕನ್ನಡ, ಧಾರವಾಡ, ಕೊಡಗು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ವಿಬಿಜಿ ರಾಮ್ ಜಿ ಅಡಿ ಮಾನವ ದಿನ ಸೃಜನೆ ಕಡಿಮೆ ಪ್ರಮಾಣದಲ್ಲಿದೆ. ಪ್ರಸ್ತುತ ರಾಜ್ಯ ವಸತಿ ಯೋಜನೆಗಳನ್ನೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವ್ಯಾಪ್ತಿಗೆ ಸೇರಿಸಿರುವ ಹಿನ್ನೆಲೆಯಲ್ಲಿ ಎಲ್ಲ ನಗರ ಪಟ್ಟಣದಲ್ಲೂ ಉದ್ಯೋಗ ನೀಡಲು ಅವಕಾಶವಿದೆ. ಇದನ್ನು ಬಳಸಿಕೊಂಡು ರಾಜ್ಯದ ಯಾವುದೇ ಭಾಗದಿಂದ ಯಾರೊಬ್ಬರೂ ಗುಳೆ ಹೋಗದಂತೆ ತಡೆಯಬೇಕು ಎಂದು ಈಶ್ವರ ಖಂಡ್ರೆ ಹೇಳಿದರು.

15 ದಿನದೊಳಗೆ ಕೂಲಿ ಹಣ ಪಾವತಿಸಿ:

ವಿಬಿಜಿ ರಾಮ್ ಜಿ ಅಡಿ ಕೆಲಸ ಮಾಡಿದ ಕಾರ್ಮಿಕರಿಗೆ ತಿಂಗಳಾದರೂ ಕೂಲಿ ಹಣ ಪಾವತಿಸದಿದ್ದರೆ ಅವರು ಕೆಲಸಕ್ಕೆ ಬರುವುದಿಲ್ಲ, ಆಗ ಯೋಜನೆಯ ಉದ್ದೇಶವೇ ವಿಫಲವಾಗುತ್ತದೆ. 15 ದಿನಗಳ ಒಳಗಾಗಿ ಕೂಲಿ ಪಾವತಿಗೆ ಕ್ರಮ ಕೈಗೊಳ್ಳಬೇಕು. ಸಿಇಓಗಳು ಪಿಡಿಓಗಳಿಗೆ ಮತ್ತು ಖಜಾನೆ ಅಧಿಕಾರಿಗಳಿಗೆ ಈ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ತಿಳಿಸಿದರು. ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲ ಸೇರಿದಂತೆ ಹಿರಿಯ ಅಧಿಕಾರಿಗಳು, ಸಿಇಓಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಬ್ಯಾಂಕಾಕ್‌ನಿಂದ ವಿಮಾನದಲ್ಲಿ ತಂದಿದ್ದ 18 ಕೋಟಿ ಮೌಲ್ಯದ ಹೈಡ್ರೋ ಪೋನಿಕ್ ಗಾಂಜಾ ವಶ

"ಮುಂಜಾನೆಯ ಮೆರಗು"

ಬೆಂಗಳೂರು,ಸೆ.22– ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 18 ಕೋಟಿ ಮೌಲ್ಯದ 51.3 ಕೆಜಿ ಹೈಡ್ರೋ ಪೋನಿಕ್ ಗಾಂಜಾ ವಶಪಡಿಸಿಕೊಂಡಿದ್ದಾರೆ.



ಬ್ಯಾಂಕಾಕ್‌ನಿಂದ ವಿಮಾನದಲ್ಲಿ ಬಂದ ಪ್ರಯಾಣಿಕರೊಬ್ಬರ ಲಗೇಜ್ ಬ್ಯಾಗ್‌ನಲ್ಲಿ ಅಡಗಿಸಿಟ್ಟುಕೊಂಡು ಬಂದಿದ್ದ ಒಂದು ಪ್ರಕರಣದಲ್ಲಿ 5.35 ಕೋಟಿ ಮೌಲ್ಯದ 15.3 ಕೆಜಿ ಹೈಡ್ರೋ ಪೋನಿಕ್ ಗಾಂಜಾ ಪತ್ತೆಯಾಗಿದೆ.

ಮತ್ತೊಂದು ಪ್ರಕರಣದಲ್ಲಿ ವಿಮಾನದಲ್ಲಿ ಬ್ಯಾಂಕಾಕ್‌ನಿಂದ ನಗರಕ್ಕೆ ಬಂದಿರುವ ಇಬ್ಬರು ಪ್ರಯಾಣಿಕರ ಲಗೇಜ್ ಬ್ಯಾಗ್‌ಗಳಲ್ಲಿ 12.57 ಕೋಟಿ ಮೌಲ್ಯದ 36 ಕೆಜಿ ಹೈಡ್ರೋ ಪೋನಿಕ್ ಗಾಂಜಾ ಪತ್ತೆಯಾಗಿದೆ. ಕಸ್ಟಮ್ಸ್ ಅಧಿಕಾರಿಗಳು ಎರಡು ಪ್ರಕರಣಗಳಲ್ಲಿ ಭಾರಿ ಪ್ರಮಾಣದ ಗಾಂಜಾವನ್ನು ಪತ್ತೆಹಚ್ಚಿ ಜಪ್ತಿ ಮಾಡಿದ್ದಾರೆ.

93.78 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ದಾಖಲೆಗಳಿಲ್ಲದೇ ಅಬುದಾಬಿಯಿಂದ ವಿಮಾನದಲ್ಲಿ ಅಡಗಿಸಿಟ್ಟುಕೊಂಡು ಲಗೇಜ್‌ನಲ್ಲಿ ತಂದಿದ್ದ 93.78 ಲಕ್ಷ ರೂ. ಮೌಲ್ಯದ 642 ಗ್ರಾಂ ಅಕ್ರಮ ಚಿನ್ನವನ್ನು ಜಪ್ತಿ ಮಾಡಿದ್ದಾರೆ.

ವಿಶೇಷ ಅಧಿವೇಶನ ಒಂದು ದಿನ ವಿಸ್ತರಿಸುವ ಸಾಧ್ಯತೆ

"ಮುಂಜಾನೆಯ ಮೆರಗು"

ಬೆಂಗಳೂರು, ಸೆ.22– ಬರ ಹಾಗೂ ಕಸ್ತೂರಿರಂಗನ್ ವರದಿಯ ಕುರಿತು ಚರ್ಚೆ ನಡೆಸಲಾಗುತ್ತಿರುವ ವಿಶೇಷ ಅಧಿವೇಶನವನ್ನು ಮತ್ತೆ ಒಂದು ದಿನ ವಿಸ್ತರಿಸುವ ಸಾಧ್ಯತೆ ಇದೆ.

ನಿನ್ನೆಯಿಂದ ಆರಂಭವಾಗಿರುವ ಅಧಿವೇಶನದಲ್ಲಿ ಇಡೀ ದಿನ ಕಸ್ತೂರಿರಂಗನ್ ವರದಿಯ ಕುರಿತು ಚರ್ಚೆಗಳಾಗಿವೆ. ಇಂದು ಮಧ್ಯಾಹ್ನದವರೆಗೂ ಚರ್ಚೆಗಳು ಮುಂದುವರೆದಿವೆ. ಬರ ಪರಿಸ್ಥಿತಿಯ ಕುರಿತು ಪ್ರಮುಖವಾಗಿ ಚರ್ಚಿಸಲು ಕರೆಯಲಾಗಿದ್ದ ಅಧಿವೇಶನದಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಸಮಯವನ್ನು ಕಸ್ತೂರಿರಂಗನ್ ವರದಿ ಕಬಳಿಸಿದೆ.

ಸಭಾಧ್ಯಕ್ಷ ಜಿ.ಎಸ್. ಪಾಟೀಲ್ ಅವರು ನೀಡಿರುವ ಮಾಹಿತಿಯ ಪ್ರಕಾರ ಬಿಜೆಪಿ ಮತ್ತು ಜೆಡಿಎಸ್ ವಿರೋಧ ಪಕ್ಷಗಳ ಸದಸ್ಯರು 3 ಗಂಟೆ ಆಡಳಿತ ಪಕ್ಷ ಕಾಂಗ್ರೆಸ್ಸಿನ ಸದಸ್ಯರು 2 ಗಂಟೆ ಚರ್ಚೆ ಮಾಡಿದ್ದಾರೆ. ಇಂದು ಮಧ್ಯಾಹ್ನದ ವರೆಗೂ ಚರ್ಚೆ ಮುಂದುವರೆದು ಮುಖ್ಯಮಂತ್ರಿಯವರು ಉತ್ತರ ನೀಡಲಿದ್ದಾರೆ.

ಒಂದೂವರೆ ದಿನದಲ್ಲಿ ಬಹುತೇಕ ಸಮಯ ಪೂರ್ಣಗೊಂಡಿತ್ತು. ರಾಜ್ಯ ಸರ್ಕಾರ ಮೊದಲ ಹಂತದಲ್ಲಿಟ್ಟ 101 ಎರಡನೇ ಹಂತದಲ್ಲಿ 23 ತಾಲ್ಲೂಕುಗಳನ್ನು ಸೇರಿಸಿ ಒಟ್ಟು 154 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಿದೆ.

ಇನ್ನೂ ಐವತ್ತು ತಾಲ್ಲೂಕುಗಳು ಬರಪೀಡಿತ ಗುಣಲಕ್ಷಣಗಳನ್ನು ಹೊಂದಿವೆ. ಇವುಗಳ ಘೋಷಣೆ ಹಾಗೂ ಪುನರ್ವಸತಿಯ ಬಗ್ಗೆ ಸುದೀರ್ಘ ಚರ್ಚೆಯಾಗಬೇಕಿದೆ. ಎಲ್ಲಾ ಶಾಸಕರು ತಮ ಕ್ಷೇತ್ರ ಬರಪೀಡಿತ ತಾಲ್ಲೂಕಿನ ವ್ಯಾಪ್ತಿಗೆ ಒಳಪಡಬೇಕು ಎಂಬ ಒತ್ತಡ ಹೇರುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ವಿಧಾನಸಭೆಯಲ್ಲಿ ವ್ಯಾಪಕ ಚರ್ಚೆಯಾಗುವ ಸಾಧ್ಯತೆ ಇದೆ. ಬಾಕಿ ಇರುವ ಒಂದೂವರೆ ದಿನ ಸಮಯ ಸಾಲುವುದಿಲ್ಲ ಎಂಬ ಕಾರಣ–ಕ್ಕಾಗಿ ವಿಧಾನಮಂಡಳದ ಅಧಿವೇಶನವನ್ನು ಗುರುವಾರದವರೆಗೂ ವಿಸ್ತರಿಸುವ



ಚರ್ಚೆಗಳಾಗಿವೆ.

ವಿರೋಧ ಪಕ್ಷಗಳು ಒಂದು ವಾರದ ಕಾಲ ಕಲಾಪವನ್ನು ವಿಸ್ತರಿಸುವಂತೆ ಒತ್ತಾಯಿಸಿವೆ. ಆದರೆ ಕಸ್ತೂರಿರಂಗನ ವರದಿ ಚರ್ಚೆಯ ಬಳಿಕ ಬರ ಪೀಡಿತ ಪ್ರದೇಶಗಳ ಸಮಸ್ಯೆ ಹಾಗೂ ಪುನರ್ ವಸತಿಗಷ್ಟೇ ಚರ್ಚೆಗಳು ಸೀಮಿತವಾದರೆ ಕಲಾಪದ ಅವಧಿ ವಿಸ್ತರಣೆಯಾಗಲಿದೆ. ಅದರ ಬದಲು ವಿರೋಧ ಪಕ್ಷಗಳು ಬಿಡದಿ ಉಪನಗರ ಯೋಜನೆ, ನೈಸ್ ವಿವಾದಗಳ ಚರ್ಚೆ ಹಾಗೂ ಕೆಪಿಎಸ್‌ಸಿ ಹಗರಣಗಳನ್ನು ಕೈಗೆತ್ತಿಕೊಳ್ಳಲು ಮುಂದಾದರೆ ಕಲಾಪ ನಿಗದಿತ ಸಮಯಕ್ಕೆ ಮುಕ್ತಾಯವಾಗಲಿದೆ ಎಂದು ಹೇಳಲಾಗುತ್ತಿದೆ.

ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಜಗಳೂರು

ಸಿ.ಆರ್.ಮಿಸ್ ನಂ. 996/2026

ಅರ್ಜಿದಾರರು: 1) ನಾಗಪ್ಪ ಬಿನ್ ನಾಗಪ್ಪ, ವಯಸ್ಸು 80 ವರ್ಷ, ವಾಸ: ಉಜ್ಜಪ್ಪವಡೆಯರಹಳ್ಳಿ ಗ್ರಾಮ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ. 2) ನಾಗಮ್ಮ ಕೋಂ ರೇವಣ್ಣ, ವಯಸ್ಸು 78 ವರ್ಷ, ವಾಸ: ಆನಗೋಡು, ದಾವಣಗೆರೆ ತಾಲೂಕು, ದಾವಣಗೆರೆ ಜಿಲ್ಲೆ. 3) ಹನುಮಕ್ಕ ಕೋಂ ರಂಗಪ್ಪ, ವಯಸ್ಸು 78 ವರ್ಷ, ವಾಸ: ಉಜ್ಜಪ್ಪವಡೆಯರಹಳ್ಳಿ ಗ್ರಾಮ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ. 4) ಸಾವಿತ್ರಮ್ಮ ಕೋಂ ದೊಡ್ಡ ಹನುಮಂತಪ್ಪ, ವಯಸ್ಸು 76 ವರ್ಷ, ವಾಸ: ಹಿರೇಅರ–ಕೆರೆ ಗ್ರಾಮ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ. 5) ಲಕ್ಕಜ್ಜರ ರಂಗಪ್ಪ ಬಿನ್ ನಾಗಪ್ಪ, ವಯಸ್ಸು 72 ವರ್ಷ, ವಾಸ: ಉಜ್ಜಪ್ಪವಡೆಯರಹಳ್ಳಿ ಗ್ರಾಮ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ. 6) ಲಕ್ಕಜ್ಜರ ಸಿದ್ದಪ್ಪ ಬಿನ್ ನಾಗಪ್ಪ, ವಯಸ್ಸು 70 ವರ್ಷ, ವಾಸ: ಉಜ್ಜಪ್ಪವಡೆಯರಹಳ್ಳಿ ಗ್ರಾಮ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ. 7) ಬಸಮ್ಮ ಕೋಂ ಸಣ್ಣಹನುಮಂತಪ್ಪ, ವಯಸ್ಸು 68 ವರ್ಷ, ವಾಸ: ಹಿರೇಅರಕೆರೆ ಗ್ರಾಮ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ.

ವಿರುದ್ಧ

ಎದುರುದಾರರು: ತಹಶೀಲ್ದಾರರು, ತಾಲೂಕು ಕಛೇರಿ, ಜಗಳೂರು. ದಾವಣಗೆರೆ ಜಿಲ್ಲೆ.

ಸಾರ್ವಜನಿಕ ನೋಟೀಸ್

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರ ತಂದೆಯಾದ ನಾಗಪ್ಪ ತಾಯಿ ಹನುಮವ್ವ ಇವರು ದಿನಾಂಕ: 08–05–1989 ರಂದು ಜಗಳೂರು ತಾಲೂಕು, ಉಜ್ಜಪ್ಪವಡೆಯರಹಳ್ಳಿ ಗ್ರಾಮದ ತಮ್ಮ ಮನೆಯಲ್ಲಿ ಸ್ವಾಭಾವಿಕವಾಗಿ ತೀರಿಕೊಂಡಿದ್ದರಿಂದ ಸದರಿ ಅಂಶವನ್ನು ಎದುರುದಾರರು ನೊಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರವನ್ನು ನೀಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿದಾರರ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯವು ನೊಂದಾಯಿಸಿಕೊಂಡು ಪ್ರಕರಣವನ್ನು ದಿನಾಂಕ: 23–10–2026 ರಂದು ಬೆಳಿಗ್ಗೆ 11–00 ಗಂಟೆಗೆ ವಿಚಾರಣೆಗಾಗಿ ನಿಗಧಿಪಡಿಸಿದ್ದು, ಅರ್ಜಿದಾರರ ಅರ್ಜಿಗೆ ಯಾರದಾದರೂ ತಕರಾರು ಇದ್ದಲ್ಲಿ ತಾವಾಗಲೀ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲೀ ನಿಗಧಿತ ದಿನಾಂಕದ ಸಮಯದಂದು ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ಅಹವಾಲು ಸಲ್ಲಿಸಬಹುದು. ತಪ್ಪಿದಲ್ಲಿ

ಬರ ಪರಿಸ್ಥಿತಿ ಕುರಿತು ಪರಿಷತ್ನಲ್ಲಿ ಕಾಂಗ್ರೆಸ್-ಬಿಜೆಪಿ ಸದಸ್ಯರ ವಾಕ್ಸಮರ

"ಮುಂಜಾನೆಯ ಮೆರಗು"

ಬೆಂಗಳೂರು,ಸೆ.22- ರಾಜ್ಯದಲ್ಲಿ ತೀವ್ರಗೊಂಡಿರುವ ಬರ ಪರಿಸ್ಥಿತಿ ಕುರಿತು ವಿಧಾನ ಪರಿಷತ್ನಲ್ಲಿ ನಡೆಯುತ್ತಿರುವ ವಿಶೇಷ ಚರ್ಚೆ ಇಂದು ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವಿನ ತೀವ್ರ ವಾಗ್ವಾದಕ್ಕೆ ಸಾಕ್ಷಿಯಾಯಿತು. ರೈತರ ಸಮಸ್ಯೆ, ಬರ ತಾಲ್ಲೂಕುಗಳ ಘೋಷಣೆ ಹಾಗೂ ಕೇಂದ್ರದ ನೆರವು ವಿಚಾರ ಮುಂದಿಟ್ಟುಕೊಂಡು ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬರ ಚರ್ಚೆ ಆರಂಭಿಸಿದ ಛಲವಾದಿ ನಾರಾಯಣಸ್ವಾಮಿ, ರೈತರ ಕಣ್ಣೀರು ಒರೆಸುತ್ತೇವೆ, ರೈತರು ನಮ ಬೆನ್ನೆಲುಬು ಎಂದು ಭಾಷಣ ಮಾಡಿದರೆ ಮಾತ್ರ ಸಾಲದು ಎಂದು ಸರ್ಕಾರವನ್ನು ಪ್ರಶ್ನಿಸಿದ ಅವರು, ಘೋಷಣೆ ಮಾಡಿ ರೈತರನ್ನು ಶೋಷಣೆ ಮಾಡುವಂತಾಗಬಾರದು ಎಂದು ಟೀಕಿಸಿದ ಅವರು, ಕೇಂದ್ರ ಸರ್ಕಾರದ ನಿಯಮಾವಳಿಗಳ ಅನ್ವಯ ಒಂದೇ ಬಾರಿಗೆ ಬರ ತಾಲ್ಲೂಕುಗಳನ್ನು ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಯಾವುದೋ ಕ್ರೀಡಾಕೂಟದಲ್ಲಿ ಗೆದ್ದು ಅರ್ಹತೆ ಪಡೆದವರಿಗೆ ಪದಕ ನೀಡಿದಂತೆ, ಒಮೊಮೆ ಒಂದೊಂದು ತಾಲ್ಲೂಕನ್ನು ಆಯ್ಕೆ ಮಾಡಿ ಬರ ತಾಲ್ಲೂಕುಗಳ ಪಟ್ಟಿಗೆ ಸೇರ್ಪಡೆ ಮಾಡುವುದು ಸರಿಯೇ? ಎಂದು ಪ್ರಶ್ನಿಸಿದ ಅವರು, ಬರ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ದೆಹಲಿಗೆ ಹೋಗುವುದೇಕೆ? :

ರಾಜ್ಯ ಸರ್ಕಾರದ ನಾಯಕರು ಪಕ್ಷ ಹಾಗೂ ನಾಯಕತ್ವದ ವಿಚಾರಗಳಿಗೆ ಪದೇಪದೇ ದೆಹಲಿಗೆ ತೆರಳುತ್ತಾರೆ ಎಂದು ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು. ಜನರ ಸಮಸ್ಯೆಗಳನ್ನು ಹೊತ್ತು ಇದೇ ರೀತಿ ದೆಹಲಿಗೆ ಎಂದಾದರೂ ಹೋಗಿದ್ದೀರಾ? ಎಂದು ಪ್ರಶ್ನಿಸಿದ ಅವರು, ಪ್ರತಿಯೊಂದು ಸಮಸ್ಯೆಗೂ ಕೇಂದ್ರ ಸರ್ಕಾರವನ್ನು ದೂರಿ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಬರ, ಎಲ್ನಿನೋ ಸೇರಿದಂತೆ ಹವಾಮಾನ ಮುನ್ಸೂಚನೆಗಳು ಮೊದಲೇ ಲಭ್ಯವಿದ್ದರೂ ಸರ್ಕಾರ ಸೂಕ್ತ ಮುನ್ನೆಚ್ಚರಿಕೆ ಕೈಗೊಂಡಿಲ್ಲ ಏಕೆ ಎಂದು ಪ್ರಶ್ನಿಸಿದ ಅವರು, ಇದೀಗ ಪರಿಸ್ಥಿತಿ



ಉಲ್ಬಣಗೊಂಡಿರುವ ಸಂದರ್ಭದಲ್ಲಿ ಬರ ನಿರ್ವಹಣೆ ಹಾಗೂ ಪರಿಹಾರ ಕಾರ್ಯಗಳ ಮೇಲ್ವಿಚಾರಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದರು. ಕೇವಲ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಹಣ ನೀಡಿದರೆ ರೈತರ ಸಮಸ್ಯೆ ಪರಿಹಾರವಾಗುವುದಿಲ್ಲ ಎಂದು ಹೇಳಿದರು.

ಬರ ಚರ್ಚೆ ವೇಳೆ ಕೇಂದ್ರದ ರೈತಪರ ಯೋಜನೆಗಳು ಹಾಗೂ ಸಾಲಮನ್ನಾ ವಿಚಾರವೂ ಪ್ರಸ್ತಾಪವಾಯಿತು. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ 71 ಸಾವಿರ ಕೋಟಿ ಸಾಲಮನ್ನಾ ಮಾಡಲಾಗಿತ್ತು ಎಂದು ಕಾಂಗ್ರೆಸ್ ಸದಸ್ಯರು ಉಲ್ಲೇಖಿಸಿದರೆ, ಬಿಜೆಪಿ ಸದಸ್ಯರು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈತರ ಖಾತೆಗಳಿಗೆ 14.40 ಲಕ್ಷ ಕೋಟಿ ಹಣ ವರ್ಗಾವಣೆ ಮಾಡಿದೆ ಎಂದು ಪ್ರತಿಪಾದಿಸಿದರು.

ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ರೈತರ ಖಾತೆಗೆ 14 ಲಕ್ಷ ಕೋಟಿ ಹಾಕಿದ್ದರೆ ದೆಹಲಿ ಗಡಿಯಲ್ಲಿ ರೈತರು ಏಕೆ ಪ್ರತಿಭಟನೆ ನಡೆಸುತ್ತಿದ್ದರು? ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ನ ಬಿ.ಕೆ. ಹರಿಪ್ರಸಾದ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ಟೀಕೆ ಮಾಡುತ್ತಾ, ದೆಹಲಿ ರೈತ ಪ್ರತಿಭಟನೆ ವೇಳೆ ನೂರಾರು ರೈತರು ಮೃತಪಟ್ಟ ವಿಚಾರ ಪ್ರಸ್ತಾಪಿಸಿದರು. ಅವರ ಹೇಳಿಕೆಗೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಹರಿಪ್ರಸಾದ್ ಅವರು ಏಕವಚನ ಬಳಸಿದ್ದಾರೆ ಎಂದು ಬಿಜೆಪಿ ಸದಸ್ಯರು ಆಕ್ಷೇಪಿಸಿದ ಹಿನ್ನೆಲೆಯಲ್ಲಿ ಸದನದಲ್ಲಿ ಗದ್ದಲ ಹೆಚ್ಚಾಯಿತು.

ಬಿಜೆಪಿ ಸದಸ್ಯ ಸಿ.ಟಿ. ರವಿ, ಹರಿಪ್ರಸಾದ್ ಅವರ ಮಾತಿನ ಶೈಲಿಯನ್ನು ಆಕ್ಷೇಪಿಸಿ ಆಚಾರವಿಲ್ಲ ನಾಲಿಗೆ ಎಂದು ತಿರುಗೇಟು ನೀಡಿದರು. ಇದರಿಂದ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಮಾತಿನ ಚಕಮಕಿ ಮತ್ತಷ್ಟು ತೀವ್ರಗೊಂಡಿತು.

ಇದೇನು ಫಿಶ್ ಮಾರ್ಕೆಟ್ನಾ? ಎಂದ ಸಭಾಪತಿ :

ಸದನದಲ್ಲಿ ಗದ್ದಲ ಹೆಚ್ಚಾಗುತ್ತಿದ್ದಂತೆ ಸಭಾಪತಿ ಸಲೀಂ ಅಹದ್ ಅವರು ಪೀಠದಿಂದ ಎದ್ದು ನಿಂತು ಸದಸ್ಯರನ್ನು ಶಾಂತಗೊಳಿಸಲು ಮುಂದಾದರು. ಸದಸ್ಯರ ವರ್ತನೆಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಇದೇನು ಫಿಶ್ ಮಾರ್ಕೆಟ್ನಾ? ಎಂದು ಪ್ರಶ್ನಿಸಿದರು.

ಇದಕ್ಕೆ ಬಿಜೆಪಿ ಸದಸ್ಯ ಕೇಶವ ಪ್ರಸಾದ್ ತಿರುಗೇಟು ನೀಡಿ, ಫಿಶ್ ಮಾರ್ಕೆಟ್ ವ್ಯವಸ್ಥೆ ಮಾಡಿದ್ದು ನೀವೇ ಎಂದು ಆಕ್ಷೇಪಿಸಿದರು. ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದರಿಂದಲೇ ಇಂತಹ ಪರಿಸ್ಥಿತಿ ಉಂಟಾಗಿದೆ ಎಂದು ಅವರು ಸಭಾಪತಿಯನ್ನು ಪ್ರಶ್ನಿಸಿದರು.

ಗದ್ದಲ ನಿಯಂತ್ರಿಸಲು ಮತ್ತೊಮೆ ಮನವಿ ಮಾಡಿದ ಸಭಾಪತಿ ಸಲೀಂ ಅಹದ್, ಜನ ನಮನ್ನು ನೋಡುತ್ತಿದ್ದಾರೆ. ಗೌರವದಿಂದ ವಿಚಾರ ಚರ್ಚೆ ಮಾಡಿ. ಒಬ್ಬರಿಗೊಬ್ಬರು ಅಗೌರವ ತರುವಂತೆ ನಡೆದುಕೊಳ್ಳಬೇಡಿ ಎಂದು ಸದಸ್ಯರಿಗೆ ಸೂಚಿಸಿದರು.ಬಳಿಕ ಸದಸ್ಯರು ತಮ ಸ್ಥಾನಗಳಲ್ಲಿ ಕುಳಿತುಕೊಂಡಿದ್ದು, ಸದನದ ಕಲಾಪ ಮತ್ತೆ ಸಹಜ ಸ್ಥಿತಿಗೆ ಮರಳಿತು. ನಂತರ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಮ ಬರ ಚರ್ಚೆಯನ್ನು ಮುಂದುವರಿಸಿದರು.

ವಿಶೇಷ ಅಧಿವೇಶನಕ್ಕೂ ಸಚಿವರ ಗೈರು, ಪ್ರತಿಪಕ್ಷಗಳ ಆಕ್ರೋಶ

"ಮುಂಜಾನೆಯ ಮೆರಗು"

ಬೆಂಗಳೂರು,ಸೆ.22- ರಾಜ್ಯದಲ್ಲಿ ಬರ ಪರಿಸ್ಥಿತಿ ಕುರಿತು ಚರ್ಚಿಸಲು ಕರೆಯಲಾಗಿರುವ ವಿಧಾನಮಂಡಲದ ವಿಶೇಷ ಅಧಿವೇಶನ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳ ನಡುವೆ ವಾಗ್ವಾದಕ್ಕೆ ವೇದಿಕೆಯಾಯಿತು.ಬರದಂತಹ ಗಂಭೀರ ವಿಚಾರದ ಚರ್ಚೆ ನಡೆಯುತ್ತಿದ್ದರೂ ಹಲವು ಸಚಿವರು ಸದನದಲ್ಲಿ ಗೈರಾಗಿರುವುದನ್ನು ಪ್ರತಿಪಕ್ಷ ಸದಸ್ಯರು ಪ್ರಶ್ನಿಸಿ ಸರ್ಕಾರದ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿದರು.



ಬರದ ಚರ್ಚೆ ಆರಂಭಕ್ಕೂ ಮುನ್ನವೇ ಸಚಿವರ ಗೈರುಹಾಜರಿ ವಿಚಾರ ಪ್ರಸ್ತಾಪವಾಯಿತು. ಸದನದಲ್ಲಿ ಹಾಜರಿರಬೇಕಿದ್ದ ಸುಮಾರು 15 ಸಚಿವರ ಪೈಕಿ ಕೆಲವೇ ಸಚಿವರು ಉಪಸ್ಥಿತರಿದ್ದರು ಎಂದು ಪ್ರತಿಪಕ್ಷ ಸದಸ್ಯರು ಗಮನ ಸೆಳೆದರು.

ಇದನ್ನು ವ್ಯಂಗ್ಯವಾಗಿ ಪ್ರಸ್ತಾಪಿಸಿದ ಸದಸ್ಯರು, ಬರದ ಬಗ್ಗೆ ಚರ್ಚೆಗೆ ಸಚಿವರ ಬರ ಬಂದಿದೆ ಎಂದು ಸರ್ಕಾರವನ್ನು ಟೀಕಿಸಿದರು. ಸಭಾಪತಿಗಳು ಗೈರಾಗಿರುವ ಸಚಿವರನ್ನು ಸದನಕ್ಕೆ ಕರೆಸುವ ಭರವಸೆ ನೀಡಿದರು.

ಬರದ ವಿಚಾರ ಮಾತ್ರ ಚರ್ಚೆಗೆ ಅವಕಾಶ :

ಇದೇ ವೇಳೆ ತೃತೀಯ ಭಾಷೆ ಸೇರಿದಂತೆ ಇತರ ವಿಷಯಗಳ ಚರ್ಚೆಗೂ ಅವಕಾಶ ನೀಡಬೇಕೆಂದು ಕೆಲವು ಬಿಜೆಪಿ ಸದಸ್ಯರು ಒತ್ತಾಯಿಸಿದರು. ಆದರೆ ಪ್ರಸಕ್ತ ವಿಶೇಷ ಅಧಿವೇಶನವನ್ನು ಮುಖ್ಯವಾಗಿ ಬರ ಪರಿಸ್ಥಿತಿ ಹಾಗೂ ಕಸ್ತೂರಿರಂಗನ್ ವರದಿ ಕುರಿತು ಚರ್ಚಿಸಲು ಕರೆಯಲಾಗಿದೆ ಎಂದು ಆಡಳಿತ ಪಕ್ಷದ ಸದಸ್ಯರು ಸ್ಪಷ್ಟಪಡಿಸಿದರು.

ಸಚಿವರಾದ ಯತೀಂದ್ರ ಸಿದ್ದರಾಮಯ್ಯ, ಸಂತೋಷ್ ಲಾಡ್ ಹಾಗೂ ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಅವರು ಅಧಿವೇಶನದ ಉದ್ದೇಶಕ್ಕೆ ಅನುಗುಣವಾಗಿ ಬರದ ವಿಚಾರದ ಮೇಲೆಯೇ ಚರ್ಚೆ ನಡೆಯಬೇಕು ಎಂದು ಒತ್ತಾಯಿಸಿದರು.

ಖದೀಮರ ಸಂತೆಯಾಗಿರುವ ಕೆಪಿಎಸ್ಸಿ ಮುಚ್ಚಬೇಕು : ಸಿಎಂ ಡಿ.ಕೆ.ಶಿವಕುಮಾರ್

"ಮುಂಜಾನೆಯ ಮೆರಗು"

ಬೆಂಗಳೂರು ಸೆ. 22- ಕರ್ನಾಟಕ ಲೋಕಸೇವಾ ಆಯೋಗ ಖದೀಮರ ಸಂತೆಯಾಗಿದೆ. ಅದನ್ನು ಮುಚ್ಚಲು ಕಾನೂನಾತಕ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಕೆಪಿಎಸ್ಸಿಯಲ್ಲಿ ಮುಚ್ಚುವುದು ಅಗತ್ಯ ಇದೆ. ಆದರೆ ಅದಕ್ಕೆ ರಾಷ್ಟ್ರಪತಿಯವರ ಅಂಕಿತ ಬೇಕು ಎಂದರು.

ಹೈಕೋರ್ಟ್ನ ನ್ಯಾಯಾಧೀಶರು ತಪ್ಪು ಮಾಡಿದಾಗ ಕ್ರಮ ತೆಗೆದುಕೊಳ್ಳಲು ಅನುಸರಿಸಬೇಕಾದ ಪದ್ಧತಿಗಳನ್ನೇ, ಕೆಪಿಎಸ್ಸಿ ಸದಸ್ಯರಿಗೂ ಪಾಲಿಸಬೇಕಾಗುತ್ತದೆ. ಎಲ್ಲವೂ ಕಾನೂನಾತಕವಾಗಿ ಪರಿಶೀಲನೆಯಲ್ಲಿವೆ ಎಂದು ಹೇಳಿದರು. ಅಧಿಕಾರಿಗಳನ್ನು ವಿಶ್ವಾಸದ ಮೇಲೆ ಕೆಪಿಎಸ್ಸಿಗೆ ನೇಮಿಸಲಾಗುತ್ತದೆ. ಅವರೇ ತಪ್ಪು ಮಾಡಿದರೆ ಇನ್ನು ಯಾರನ್ನು ನಂಬುವುದು. ಆಯೋಗದ ಸದಸ್ಯರಂತೂ ಅಂಗಡಿ ತೆರೆದು ಕುಳಿತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಹಿಂದೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ 16 ಸದಸ್ಯರನ್ನು ನೇಮಿಸಲಾಗಿತ್ತು, ಆ ಸಂಖ್ಯೆ ಕಡಿಮೆ



ಮಾಡುವ ಬಗ್ಗೆ ಕೂಡ ಚರ್ಚೆಯಾಗಿತ್ತು ಎಂದು ತಿಳಿಸಿದರು.ಕರ್ನಾಟಕ ಲೋಕಸೇವಾ ಆಯೋಗವನ್ನು ಮುಚ್ಚುವುದು ತಮ ಆದ್ಯತೆ. ಅದಕ್ಕಾಗಿ ಕಾನೂನು ತಜ್ಞರ ಜೊತೆ ಚರ್ಚೆ ಮಾಡುತ್ತಿದ್ದೇನೆ. ಈ ಹಿಂದೆ ತಾವು ಇಂಧನ ಸಚಿವರಾಗಿದ್ದಾಗ ಹಲವಾರು ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದ್ದು, ಅದರಲ್ಲೂ ಕೆಲವರು ಒ ಎಂ ಆರ್ ಸೀಟುಗಳನ್ನು ಪೆನ್ಸಿಲ್ ನಲ್ಲಿ ಬರೆದು, ಆನಂತರ ತಿದ್ದುವ ಪ್ರಯತ್ನವನ್ನು ಮಾಡಿದ್ದರು. ಅದಕ್ಕೆ ತಾವು ಅವಕಾಶ ನೀಡಲಿಲ್ಲ ಎಂದು ವಿವರಿಸಿದರು.

ಕೆಪಿಎಸ್ಸಿ ಹಗರಣದ ತನಿಖೆಗಾಗಿ ಹೈಕೋರ್ಟ್ ಎಸ್ಐಟಿ ರಚಿಸಿರುವುದು ಸ್ವಾಗತರ್ಹ. ಆದರೆ ತನಿಕಾಧಿಕಾರಿಗಳು ಯಾರು ಇರಬೇಕು ಎಂಬುದನ್ನು ಹೈಕೋರ್ಟ್ ನಿರ್ಧರಿಸಿವುದು ಸರಿಯಲ್ಲ ಎಂದರು.ಈಗಾಗಲೇ ಸಿಐಡಿ ಅಧಿಕಾರಿಗಳು ಉತ್ತಮವಾದ ತನಿಖೆ ಮಾಡಿದ್ದಾರೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕೂಡ ತನಿಖೆ ಆರಂಭಿಸಿದ್ದಾರೆ.

ಹಂತದಲ್ಲಿ ಹೈಕೋರ್ಟ್ ನೇರವಾಗಿ ತನಿಖೆಯ ಮೇಲುಸ್ತುವಾರಿಯನ್ನು ನೋಡಬಹುದಿತ್ತು. ತನಿಖೆ ಸರಿ ಇಲ್ಲ ಎಂದರೆ, ಆಗ ಅದರ ಪ್ರಶ್ನೆ ಬೇರೆ ಎಂದರು. ಎಸ್ಐಟಿ ರಚಿಸಿರುವುದು ತಪ್ಪಲ್ಲ ಆದರೆ ಇಂತಹದೇ ಅಧಿಕಾರಿಗಳಿರಬೇಕು ಎಂದು ನಿರ್ದೇಶಿಸಿರುವುದು ರಾಜ್ಯ ಸರ್ಕಾರದ ಅಧಿಕಾರಿ ವ್ಯಾಪ್ತಿಯನ್ನು ಪ್ರಶ್ನಿಸುವಂತೆ ಮಾಡಿದೆ. ದೆಹಲಿಯಿಂದಲೂ ತಮಗೆ ಈ ಬಗ್ಗೆ ಫೋನ್ ಗಳು ಬರುತ್ತಿದೆ ನಾನು ಕಾನೂನಾತಕವಾಗಿ ವಿಚಾರವನ್ನು ಪರಿಶೀಲಿಸುತ್ತೇನೆ ಎಂದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ಹಣಕಾಸಿನ ಕೊರತೆ ಇರುವುದರಿಂದ ಹೊಸ ಯೋಜನೆ ಘೋಷಿಸಬಾರದು ಎಂದು ಸಲಹೆ ಮಾಡಿದೆ. ಅವರಿಗೆ ಸಲಹೆ ಮಾಡಲು ಅಧಿಕಾರವಿದೆ. ಆದರೆ ಏನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ನಿರ್ಧರಿಸಲು ರಾಜ್ಯ ಸರ್ಕಾರಕ್ಕೆ ಬಿಟ್ಟದ್ದು.


ನಾವು ಅಧಿಕಾರದಲ್ಲಿರುವವರೆಗೂ ಅದನ್ನು ನೋಡಿಕೊಳ್ಳುತ್ತೇವೆ ಎಂದರು ಜನಪರವಾದ ಯೋಜನೆಗಳನ್ನು ಯಾವುದು ಉಳಿಸಿಕೊಳ್ಳಬೇಕು ಯಾವುದನ್ನು ಕಡಿತ ಮಾಡಬೇಕು ಎಂಬುದನ್ನು ನಮಗೆ ಗೊತ್ತಿದೆ. ಕೇಂದ್ರದ ಪ್ರಧಾನಿಯವರು ರೈತರಿಗೆ 5ಸಾವಿರ ಕೊಡುತ್ತೇವೆ ಎಂದಿದ್ದರಲ್ಲ, ಅದಕ್ಕೆ ಭಿಕ್ಷೆ ಬೇಡುವಂತಾಗಿದೆ. ಮೊದಲು ಆ ಹಣವನ್ನು ಬಿಡುಗಡೆ ಮಾಡಲಿ ಎಂದು ಸಲಹೆ ನೀಡಿದರು ಮತ್ತು ರಾಜ್ಯದ ಪ್ರಾಮಾಣಿಕ ತೆರಿಗೆ ಪಾಲನ್ನು ನೀಡಬೇಕು ಎಂದು ಒತ್ತಾಯಿಸಿದರು. ಬರ ಘೋಷಣೆಯಾಗದಿದ್ದರೆ ರಾಜೀನಾಮೆ ನೀಡುತ್ತೇನೆ ಎಂದು ಹಿರಿಯ ನಾಯಕ ಎಚ್.ಕೆ.ಪಾಟೀಲ್ ಒತ್ತಾಯಿಸಿರುವುದರಲ್ಲಿ ತಪ್ಪಿಲ್ಲ. ಆದರೆ ತಾಂತ್ರಿಕ ಸಮಸ್ಯೆಗಳನ್ನು ಅಧ್ಯಯನ ಮಾಡಬೇಕು ಎಂದರು.

ಬೈಕ್ಗೆ ಗೂಡ್ಸ್ ವಾಹನ ಡಿಕ್ಕಿಯಾಗಿ ದಂಪತಿ ಸ್ಥಳದಲ್ಲೇ ಸಾವು

"ಮುಂಜಾನೆಯ ಮೆರಗು"

ಧಾರವಾಡ, ಸೆ.22- ಗೂಡ್ಸ್ ವಾಹನವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹುಬ್ಬಳ್ಳಿ-ಗದಗ ಬೈಪಾಸ್ನಲ್ಲಿ ತಡರಾತ್ರಿ ನಡೆದಿದೆ.ಮೃತರನ್ನು ಜಯರಾಜನಗರದ ನಿವಾಸಿಗಳಾದ ರಜನಿ ಹಾಗೂ ಸುಕುಮಾರ ಎಂದು ಗುರುತಿಸಲಾಗಿದೆ.

ರಜನಿ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯೊಂದರಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. ಕಳೆದ ರಾತ್ರಿ ಕೆಲಸ ಮುಗಿಸಿಕೊಂಡು ಪತಿಯೊಂದಿಗೆ ಬೈಕ್ನಲ್ಲಿ ಮನೆಗೆ ತೆರಳುತ್ತಿದ್ದಾಗ ಎದುರಿನಿಂದ



ಬಂದ ಗೂಡ್ಸ್ ವಾಹನ ಬೈಕ್ಗೆ ಡಿಕ್ಕಿ ಹೊಡೆದ ರಭಸಕ್ಕೆ ಇಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸುದ್ದಿ ತಿಳಿದ ಕೂಡಲೇ ಪೂರ್ವ ಸಂಚಾರಿ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೆಪಿಎಸ್ಸಿ ಹಗರಣದ ತನಿಖೆ ಡಿಜಿಪಿ ಅಲೋಕ್ಕುಮಾರ್ ನೇತೃತ್ವದಲ್ಲಿ ಎಸ್ಐಟಿ ರಚನೆ

"ಮುಂಜಾನೆಯ ಮೆರಗು"

ಬೆಂಗಳೂರು,ಸೆ.22- ಕೆಪಿಎಸ್ಸಿ ನೇಮಕಾತಿ ಹಗರಣಗಳ ಸಂಬಂಧ ಹೊಸದಾಗಿ ತನಿಖೆ ನಡೆಸಲು ಡಿಜಿಪಿ ಅಲೋಕ್ಕುಮಾರ್ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿದೆ.ಈ ವಿಶೇಷ ತನಿಖಾ ತಂಡ (ಎಸ್ಐಟಿ) ತನ್ನ ಕಾರ್ಯವನ್ನು ಆರಂಭಿಸಿದ್ದು ಇಂದು ಅಥವಾ ನಾಳೆ ಈ ಸಂಬಂಧ ಸಭೆ ನಡೆಸಲಿದೆ.

ನೇಮಕಾತಿ ಅಕ್ರಮ ಸಂಬಂಧ ಕಡತಗಳ ಪರಿಶೀಲನೆ, ಸಿಐಡಿ ದಾಖಲೆಗಳು, ಸಾಕ್ಷ್ಯವನ್ನು ಪರಿಶೀಲಿಸುವುದಲ್ಲದೇ ಈಗಾಗಲೇ ಸಿಐಡಿ ವಿಚಾರಣೆ ಎದುರಿಸಿರುವ ಎಲ್ಲರಿಗೂ ವಿಚಾರಣೆಗೆ ಹಾಜರಾಗುವಂತೆ ಎಸ್ಐಟಿ ಸೂಚಿಸುವ ಸಾಧ್ಯತೆ ಇದೆ. ಅಭ್ಯರ್ಥಿಗಳು, ಮಧ್ಯವರ್ತಿಗಳು, ಕೆಪಿಎಸ್ಸಿ ಸಿಬ್ಬಂದಿ ಹಾಗೂ ಸದಸ್ಯರ ವಿಚಾರಣೆಯನ್ನು ಎಸ್ಐಟಿ ನಡೆಸಲಿದೆ.

ಕಾರಾಗೃಹಗಳ ಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ರಚಿಸಲಾಗಿರುವ ಎಸ್ಐಟಿ ತಂಡದಲ್ಲಿ ರಾಜ್ಯದ ವಿಧಿ ವಿಜ್ಞಾನ ಪ್ರಯೋಗಾಲಯದ ನಿರ್ದೇಶಕರಾದ ಐಜಿಪಿ ಡಾ.ದಿವ್ಯಾ ಗೋಪಿನಾಥ್, ಉಪಪೊಲೀಸ್ ಆಯುಕ್ತ ಅನೂಪ್ ಶೆಟ್ಟಿ , ಎಸ್ಪಿ ಕುಶಾಲ್ ಚೌಕ್ಸೆ ಮತ್ತು ಉಪ ಪೊಲೀಸ್ ಆಯುಕ್ತೆ ಕ್ಷಮಾ ಮಿಶ್ರಾ ಅವರು ಸದಸ್ಯರಾಗಿರುತ್ತಾರೆ.

ಸಿಐಡಿ ವರದಿ ಸಲ್ಲಿಕೆ: ಎಸ್ಐಟಿ ರಚನೆ ಬೆನ್ನಲ್ಲೇ ಸರ್ಕಾರಕ್ಕೆ ಸಿಐಡಿ ತನಿಖಾ ವರದಿ ಸಲ್ಲಿಸಿದೆ. ಆ ವರದಿಯಲ್ಲಿ ಕೆಪಿಎಸ್ಸಿ ಹಗರಣದ ಕುರಿತು ಸಿಐಡಿ ಎಳೆಎಳೆಯಾಗಿ ಮಾಹಿತಿ ಬಿಚ್ಚಿಟ್ಟಿದೆ. ಸಿಐಡಿ ಸಲ್ಲಿಸಿರುವ ತನಿಖಾ ವರದಿಯಲ್ಲಿ ಹಣ ವರ್ಗಾವಣೆ, ಹ್ಯುಣಟಿಜಜಜಿಟಿಜಜಗಳ ಮಾರಾಟದ ಬಗ್ಗೆ ವಿಸ್ತಾರವಾಗಿ ಉಲ್ಲೇಖಿಸಲಾಗಿದೆ. ಪಶುವೈದ್ಯಾಧಿಕಾರಿ ಹುದ್ದೆ ಅಕ್ರಮ ನೇಮಕಾತಿ ಸಂಬಂಧ ಸಿಐಡಿ ಈವರೆಗೂ 92 ಲಕ್ಷ ರೂ. ಜಪ್ತಿ ಮಾಡಿದೆ.

ಭಾಲ್ಕಿ ಪಟ್ಟಣದ ಓಂ ಲಕೀ ಸೌಹಾರ್ದ ಸಹಕಾರಿ ಬ್ಯಾಂಕ್, ಕೋಟಕ್ ಮಹೀಂದ್ರಾ ಬ್ಯಾಂಕ್ ಖಾತೆಗಳಿಗೆ 92 ಲಕ್ಷ ರೂ. ಹಣ ಜಮೆಯಾಗಿರುವುದು ಸಿಐಡಿ ತನಿಖೆಯಲ್ಲಿ ಪತ್ತೆಯಾಗಿದೆ.

ಕನ್ನಾಳೆ ಸೂಚನೆಯಂತೆ ಐವರು ಅಭ್ಯರ್ಥಿಗಳು ಹಣ ವರ್ಗಾಯಿಸಿದ್ದರು.

ಕೆರೆಗಳಲ್ಲಿ ಮೀನುಗಾರಿಕೆ ಹಂತ ಹಂತವಾಗಿ ಅಭಿವೃದ್ಧಿ

ಜಗಳೂರು ತಾಲೂಕಿನಲ್ಲಿ 65 ಸಾವಿರ ಮೀನು ಮರಿಗಳ ವಿತರಣೆ

"ಮುಂಜಾನೆಯ ಮೆರಗು"

ಜಗಳೂರು ಸೆ, 22– ತಾಲೂಕಿನಲ್ಲಿ ಲಭ್ಯವಿರುವ ಕೆರೆಗಳ ನೀರನ್ನು ಸದ್ಬಳಕೆ ಮಾಡಿಕೊಂಡು ಮೀನುಗಾರಿಕೆ ಹಾಗೂ ಮೀನು ಸಾಕಾಣಿಕೆಯನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಶಶಿಕುಮಾರ್ ತಿಳಿಸಿದರು.

ಮಂಗಳವಾರ ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದ ಆವರಣದಲ್ಲಿರುವ ಮೀನುಗಾರಿಕೆ ಇಲಾಖೆಯ ಕಚೇರಿ ಪಕ್ಕದಲ್ಲಿ ನಿರ್ಮಿಸಲಾಗಿರುವ ಕೃತಕ ಮೀನು ಸಾಕಾಣಿಕೆ ತೊಟ್ಟಿಗಳಲ್ಲಿ ಬೆಳೆಸಲಾಗಿದ್ದ ಮೀನು ಮರಿಗಳನ್ನು ಫಲಾನುಭವಿಗಳಿಗೆ ವಿತರಿಸಿ ಅವರು ಮಾತನಾಡಿದರು.

ತಾಲೂಕಿನಲ್ಲಿ ಮೀನುಗಾರಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಮೀನು ಮರಿಗಳನ್ನು ಹಂತ ಹಂತವಾಗಿ ಕೆರೆಗಳಿಗೆ ಬಿಡಲಾಗುತ್ತಿದೆ. ಕಳೆದ ತಿಂಗಳು 65 ಸಾವಿರ ಮೀನು ಮರಿಗಳನ್ನು ವಿತರಿಸಲಾಗಿದ್ದು, ಇದೀಗ ಮತ್ತೆ 65 ಸಾವಿರ ಮೀನು ಮರಿಗಳನ್ನು ವಿತರಿಸಲಾಗುತ್ತಿದೆ. ಇದರಿಂದ ಸ್ಥಳೀಯ ಮೀನುಗಾರರಿಗೆ ಆರ್ಥಿಕ ಚಟುವಟಿಕೆಗೆ ಉತ್ತೇಜನ ದೊರೆಯಲಿದ್ದು, ಕೆರೆ ಆಧಾರಿತ ಮೀನುಗಾರಿಕೆ ಮತ್ತಷ್ಟು ವಿಸ್ತರಿಸುವ ನಿರೀಕ್ಷೆಯಿದೆ ಎಂದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳಲ್ಲಿ ಸುಮಾರು 12 ಲಕ್ಷ ಮೀನು ಮರಿಗಳನ್ನು, ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಕೆರೆಗಳಲ್ಲಿ ಸುಮಾರು 24 ಲಕ್ಷ ಮೀನು ಮರಿಗಳನ್ನು ಈಗಾಗಲೇ ಬಿಡಲಾಗಿದೆ. ಕೆರೆಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣವನ್ನು ಪರಿಗಣಿಸಿ ಮೀನು ಮರಿಗಳನ್ನು ಹಂತ ಹಂತವಾಗಿ ಬಿಡುವ ಕಾರ್ಯವನ್ನು ಮುಂದುವರಿಸಲಾಗುತ್ತಿದೆ ಎಂದು ಹೇಳಿದರು.

ತಾಲೂಕಿನಲ್ಲಿ ಈ ಬಾರಿ ಮಳೆಯ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಹಲವು ಕೆರೆಗಳಲ್ಲಿ ನೀರಿನ ಸಂಗ್ರಹಣೆ ನಿರೀಕ್ಷಿತ ಮಟ್ಟದಲ್ಲಿಲ್ಲ. ಆದರೂ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ನೀರು ಲಭ್ಯವಾಗಿರುವ ಕೆರೆಗಳಲ್ಲಿ ಮೀನು ಮರಿಗಳ ಬೆಳವಣಿಗೆಗೆ ಅನುಕೂಲವಾಗುವ ರೀತಿಯಲ್ಲಿ ಸಾಕಾಣಿಕೆ ಮುಂದುವರಿಸಲು ಇಲಾಖೆ ಕ್ರಮ ಕೈಗೊಳ್ಳುತ್ತಿದೆ ಎಂದು ಶಶಿಕುಮಾರ್ ಹೇಳಿದರು.

ಬರದ ನಾಡಿನಲ್ಲಿ ಪರ್ಯಾಯ ಆದಾಯಕ್ಕೆ ಮೀನುಗಾರಿಕೆ

ಜಗಳೂರು ತಾಲೂಕು ಸಾಮಾನ್ಯವಾಗಿ ಮಳೆಯ ಕೊರತೆ ಎದುರಿಸುವ ಪ್ರದೇಶವಾಗಿದ್ದು, ಕೃಷಿಯ ಮೇಲಿನ ಅವಲಂಬನೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಕೆರೆಗಳಲ್ಲಿ ಲಭ್ಯವಾಗುವ ನೀರನ್ನು ಬಳಸಿಕೊಂಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದರಿಂದ ಗ್ರಾಮೀಣ ಭಾಗದ ಜನರಿಗೆ ಪರ್ಯಾಯ ಆದಾಯದ ಮೂಲ ಕಲ್ಪಿಸಬಹುದಾಗಿದೆ. ಈ ನಿಟ್ಟಿನಲ್ಲಿ ಮೀನುಗಾರಿಕೆ ಇಲಾಖೆಯಿಂದ ಅಗತ್ಯ ಮಾರ್ಗದರ್ಶನ ಹಾಗೂ ಮೀನು ಮರಿಗಳ ವಿತರಣೆಯನ್ನು ಮುಂದುವರಿಸಲಾಗುವುದು ಎಂದು ತಿಳಿಸಿದರು.



ಕೆರೆಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಯಾದರೆ ಮೀನು ಸಾಕಾಣಿಕೆಯಲ್ಲಿ ತೊಡಗಿಸಿಕೊಳ್ಳುವ ರೈತರು ಹಾಗೂ ಮೀನುಗಾರರಿಗೆ ಆರ್ಥಿಕ ಲಾಭ ದೊರೆಯುವುದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳಿಗೂ ಉತ್ತೇಜನ ಸಿಗಲಿದೆ. ಹೀಗಾಗಿ ನೀರಿನ ಲಭ್ಯತೆ ಇರುವ ಕೆರೆಗಳನ್ನು ಗುರುತಿಸಿ ಹಂತ ಹಂತವಾಗಿ ಮೀನುಗಾರಿಕೆ ಸಾಕಾಣಿಕೆಯನ್ನು ವಿಸ್ತರಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮೀನುಗಾರಿಕೆ ಇಲಾಖೆಯ ಸಿಬ್ಬಂದಿ ಸಂತೋಷ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ಪ್ರವಾಸದ ಮೂಲಕ ವಿಶ್ರಾಂತಿ

ಸ್ವಚ್ಛ ಜಗಳೂರಿಗಾಗಿ ದುಡಿಯುವ ಕಾರ್ಮಿಕರಿಗೆ ಇಲಾಖೆಯಿಂದ ವಿಶೇಷ ಪ್ರವಾಸ

"ಮುಂಜಾನೆಯ ಮೆರಗು"

ಜಗಳೂರು ಸೆ, 22– ಪಟ್ಟಣವನ್ನು ಸ್ವಚ್ಛ ಹಾಗೂ ಸುಂದರವಾಗಿಡಲು ಪ್ರತಿನಿತ್ಯ ಶ್ರಮಿಸುವ ಪೌರಕಾರ್ಮಿಕರಿಗೆ ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಪಟ್ಟಣ ಪಂಚಾಯಿತಿ ವತಿಯಿಂದ ಪ್ರವಾಸ ಆಯೋಜಿಸಲಾಗಿತ್ತು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಿ. ಲೋಕ್ಯಾನಾಯ್ಕ ತಿಳಿಸಿದರು.

ಪಟ್ಟಣದ ಸ್ವಚ್ಛತೆ, ನೈರ್ಮಲ್ಯ ಹಾಗೂ ಸಾರ್ವಜನಿಕ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಅತ್ಯಂತ ಮಹತ್ವದ್ದಾಗಿದೆ. ಬೆಳಗಿನ ಜಾವದಿಂದಲೇ ಪಟ್ಟಣದ ವಿವಿಧ ಬಡಾವಣೆಗಳಿಗೆ ತೆರಳಿ ಕಸ ಸಂಗ್ರಹಿಸುವುದು, ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವುದು ಸೇರಿದಂತೆ ಹಲವು ಕೆಲಸಗಳನ್ನು ಪೌರಕಾರ್ಮಿಕರು ನಿರಂತರವಾಗಿ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಅವರ ಕೆಲಸದ ಒತ್ತಡದಿಂದ ಕೊಂಚ ವಿರಾಮ ದೊರೆಯಬೇಕು ಹಾಗೂ ಕುಟುಂಬದವರೊಂದಿಗೆ ಸಂತೋಷದಿಂದ ಸಮಯ ಕಳೆಯಲು ಅವಕಾಶ ಸಿಗಬೇಕು ಎಂಬ ಉದ್ದೇಶದಿಂದ ಪ್ರವಾಸ ಆಯೋಜಿಸಲಾಗಿದೆ ಎಂದು ಹೇಳಿದರು.



ಪೌರಕಾರ್ಮಿಕರ ದಿನಾಚರಣೆಯನ್ನು ಕೇವಲ ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತಗೊಳಿಸದೆ, ಅವರ ಶ್ರಮವನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರವಾಸದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿನಿತ್ಯ ಸಾರ್ವಜನಿಕರ ಆರೋಗ್ಯ ಮತ್ತು ಪಟ್ಟಣದ ಸ್ವಚ್ಛತೆಗಾಗಿ ದುಡಿಯುವ ಕಾರ್ಮಿಕರಿಗೆ ಇಂತಹ ಕಾರ್ಯಕ್ರಮಗಳು ಮಾನಸಿಕವಾಗಿ ಉತ್ಸಾಹ ನೀಡಲಿವೆ ಎಂದು ಅವರು ಹೇಳಿದರು.

ಸಿಗಂದೂರು, ಕೊಲ್ಲೂರು ಕ್ಷೇತ್ರಗಳಿಗೆ ಭೇಟಿ

ಪಟ್ಟಣ ಪಂಚಾಯಿತಿಯ ಪೌರಕಾರ್ಮಿಕರು ಹಾಗೂ ಸಿಬ್ಬಂದಿ ಸೇರಿದಂತೆ ಎರಡು ಬಸ್‌ಗಳಲ್ಲಿ ಶನಿವಾರ ರಾತ್ರಿ ಪ್ರವಾಸಕ್ಕೆ ತೆರಳಿದರು. ಸಿಗಂದೂರು, ಕೊಲ್ಲೂರು ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಪ್ರವಾಸಿ ಕ್ಷೇತ್ರಗಳಿಗೆ ಭೇಟಿ ನೀಡಿ ಅಲ್ಲಿನ ಪ್ರಮುಖ ಸ್ಥಳಗಳನ್ನು ವೀಕ್ಷಿಸಿದರು.

ಪ್ರವಾಸದ ವೇಳೆ ಪೌರಕಾರ್ಮಿಕರು ಪರಸ್ಪರ ಸ್ನೇಹಭಾವದಿಂದ ಸಮಯ ಕಳೆಯುವುದರ ಜೊತೆಗೆ, ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಹಲವು ದಿನಗಳ ಕೆಲಸದ ಒತ್ತಡದ ನಡುವೆ ಪ್ರವಾಸ ಕೈಗೊಂಡಿರುವುದು ಅವರಿಗೆ ಹೊಸ ಚೈತನ್ಯ ನೀಡಿದೆ.

ಎರಡು ಬಸ್‌ಗಳಲ್ಲಿ ತೆರಳಿದ್ದ ಸಿಬ್ಬಂದಿ ಸೋಮವಾರ ಮುಂಜಾನೆ ಜಗಳೂರಿಗೆ ವಾಪಸಾಗಿ, ಯಾವುದೇ ವಿಳಂಬವಿಲ್ಲದೆ ತಮ್ಮ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಸಾರ್ವಜನಿಕ ಸೇವೆಯ ಜವಾಬ್ದಾರಿಯನ್ನು ಅರಿತು ಪೌರಕಾರ್ಮಿಕರು ಪ್ರವಾಸದ ಬಳಿಕವೂ ಕರ್ತವ್ಯಕ್ಕೆ ಮರಳಿರುವುದು ಗಮನಾರ್ಹವಾಗಿದೆ ಎಂದು ಸಿ. ಲೋಕ್ಯಾನಾಯ್ಕ ಹೇಳಿದರು.

ಪಟ್ಟಣದ ಸ್ವಚ್ಛತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಪೌರಕಾರ್ಮಿಕರ ಸೇವೆಯನ್ನು ಸಾರ್ವಜನಿಕರು ಗುರುತಿಸಿ ಅವರಿಗೆ ಸಹಕಾರ ನೀಡಬೇಕು. ಮನೆ ಹಾಗೂ ಅಂಗಡಿಗಳಲ್ಲಿನ ಕಸವನ್ನು ಎಲ್ಲೆಂದರಲ್ಲಿ ಎಸೆಯದೆ, ಪೌರಕಾರ್ಮಿಕರಿಗೆ ಸಹಕರಿಸುವ ಮೂಲಕ ಸ್ವಚ್ಛ ಜಗಳೂರು ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು.

ಫಲವಾದಿ, ಭೋವಿ ಸಮುದಾಯ ಭವನಕ್ಕೆ ತಲಾ 2 ಕೋಟಿ ಅನುದಾನ

ಸಚಿವ ಕೆ.ಎಚ್.ಮುನಿಯಪ್ಪ ಭೇಟಿ ಮಾಡಿದ ಶಾಸಕ ಬಿ.ದೇವೇಂದ್ರಪ್ಪ ನೇತೃತ್ವದ ನಿಯೋಗ

"ಮುಂಜಾನೆಯ ಮೆರಗು"

ಜಗಳೂರು ಸೆ, 22– ತಾಲ್ಲೂಕಿನಲ್ಲಿ ಫಲವಾದಿ ಹಾಗೂ ಭೋವಿ ಸಮುದಾಯ ಭವನಗಳ ನಿರ್ಮಾಣಕ್ಕೆ ತಲಾ 2 ಕೋಟಿ ಅನುದಾನ ಮಂಜೂರಾಗಿದ್ದು, ಕಾಮಗಾರಿಗೆ ಅಗತ್ಯ ಕ್ರಮಗಳನ್ನು ಶೀಘ್ರ ಕೈಗೊಳ್ಳುವಂತೆ ಒತ್ತಾಯಿಸಿ ಶಾಸಕ ಬಿ.ದೇವೇಂದ್ರಪ್ಪ ಅವರ ನೇತೃತ್ವದಲ್ಲಿ ಫಲವಾದಿ ಹಾಗೂ ಭೋವಿ ಸಮಾಜದ ಮುಖಂಡರು ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಬಿ.ದೇವೇಂದ್ರಪ್ಪ, ಜಗಳೂರು ತಾಲ್ಲೂಕಿನ ಹಿಂದುಳಿದ ಹಾಗೂ ಶೋಷಿತ ಸಮುದಾಯಗಳಿಗೆ ಅಗತ್ಯವಿರುವ ಸಮುದಾಯ ಭವನಗಳನ್ನು ಹಂತ ಹಂತವಾಗಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈಗಾಗಲೇ ಕನಕ ಭವನ ಹಾಗೂ ಯಾದವ ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ. ಫಲವಾದಿ ಹಾಗೂ ಭೋವಿ ಸಮುದಾಯ ಭವನಗಳ ನಿರ್ಮಾಣಕ್ಕೆ ಮಾಜಿ ಸಚಿವ ಡಾ.ಎಚ್.ಸಿ.ಮಹಾದೇವಪ್ಪ ಅವರ ಅವಧಿಯಲ್ಲಿಯೇ ಪ್ರಸ್ತಾವನೆ ಸಲ್ಲಿಸಲಾಗಿತ್ತು. ನಂತರ ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟ ಬದಲಾವಣೆಯಿಂದಾಗಿ ಪ್ರಕ್ರಿಯೆ ವಿಳಂಬವಾಗಿತ್ತು ಎಂದು ಹೇಳಿದರು.

ಇದೀಗ ಫಲವಾದಿ ಹಾಗೂ ಭೋವಿ ಸಮುದಾಯ ಭವನಗಳ ನಿರ್ಮಾಣಕ್ಕೆ ತಲಾ 2 ಕೋಟಿ ಅನುದಾನ ಮಂಜೂರಾಗಿದೆ. ಈ ಹಿನ್ನೆಲೆಯಲ್ಲಿ ನೂತನ ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಅವರನ್ನು ಭೇಟಿ ಮಾಡಿ, ಎರಡೂ ಸಮುದಾಯಗಳ ಮುಖಂಡರೊಂದಿಗೆ ಚರ್ಚೆ ನಡೆಸಲಾಗಿದೆ ಎಂದು ಶಾಸಕ ದೇವೇಂದ್ರಪ್ಪ ತಿಳಿಸಿದರು.



ದಾಖಲೆ ಸಲ್ಲಿಸಿದರೆ ಶೀಘ್ರ ಕ್ರಮ

ಮನವಿ ಸ್ವೀಕರಿಸಿ ಮಾತನಾಡಿದ ಸಚಿವ ಕೆ.ಎಚ್.ಮುನಿಯಪ್ಪ, ಸಮುದಾಯ ಭವನ ನಿರ್ಮಾಣಕ್ಕೆ ಅಗತ್ಯವಿರುವ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿದರು. ದಾಖಲೆಗಳು ಸಲ್ಲಿಕೆಯಾದ ಬಳಿಕ ಅಧಿಕಾರಿಗಳೊಂದಿಗೆ ಚರ್ಚಿಸಿ, ಕಾಮಗಾರಿ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಫಲವಾದಿ ಸಮಾಜದ ತಾಲ್ಲೂಕು ಅಧ್ಯಕ್ಷ ನಿಜಲಿಂಗಪ್ಪ, ಭೋವಿ ಸಮಾಜದ ತಾಲ್ಲೂಕು ಅಧ್ಯಕ್ಷ ಅರ್ಜುನಪ್ಪ, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ, ಪ್ರಾಂಶುಪಾಲ ನಾಗಲಿಂಗಪ್ಪ, ಹನುಮಂತಪ್ಪ, ವೀರಸ್ವಾಮಿ, ದೊಡ್ಡಬೊಮ್ಮನಹಳ್ಳಿ ನಾಗೇಶ್, ಚಂದ್ರಪ್ಪ, ಪತ್ರಕರ್ತರಾದ ಎಚ್.ಎಂ.ಹೊಳೆ ಧನ್ಯಕುಮಾರ್, ಮಾದಿಹಳ್ಳಿ ಮಂಜುನಾಥ್, ಶಾಸಕರ ಆಪ್ತ ಸಹಾಯಕರಾದ ಗೌಸ್ ಅಹಮ್ಮದ್, ವೀರೇಶ್ ಗೌಡ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಪೌರಕಾರ್ಮಿಕರ ಆರೋಗ್ಯವೇ ಪಟ್ಟಣದ ಸ್ವಚ್ಛತೆಯ ಬೆನ್ನೆಲುಬು

ವೈಯಕ್ತಿಕ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಬೇಡ; ಸುರಕ್ಷತಾ ಪರಿಕರಗಳ ಬಳಕೆ ಕಡ್ಡಾಯ: ಲೋಕ್ಯಾನಾಯ್ಕ

"ಮುಂಜಾನೆಯ ಮೆರಗು"

ಜಗಳೂರು, ಸೆ.22– ಪಟ್ಟಣವನ್ನು ಪ್ರತಿನಿತ್ಯ ಸ್ವಚ್ಛವಾಗಿಡುವ ಮೂಲಕ ಸಾರ್ವಜನಿಕರ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಪೌರಕಾರ್ಮಿಕರು ತಮ್ಮ ವೈಯಕ್ತಿಕ ಆರೋಗ್ಯದ ಬಗ್ಗೆಯೂ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಿ. ಲೋಕ್ಯಾನಾಯ್ಕ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪೌರಕಾರ್ಮಿಕರಿಗಾಗಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಪ್ರತಿದಿನ ವಿವಿಧ ರೀತಿಯ ತ್ಯಾಜ್ಯ ಹಾಗೂ ಕಲುಷಿತ ವಾತಾವರಣದ ನಡುವೆ ಕಾರ್ಯನಿರ್ವಹಿಸುತ್ತಾರೆ. ಹೀಗಾಗಿ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚಿರುತ್ತದೆ ಎಂದರು.



ಆರೋಗ್ಯ ಸಮಸ್ಯೆ ನಿರ್ಲಕ್ಷಿಸದಿರಿ

ಪೌರಕಾರ್ಮಿಕರು ದುಶ್ಚಟಗಳಿಂದ ದೂರವಿದ್ದು, ಕೆಲಸದ ಸಂದರ್ಭದಲ್ಲಿ ಕೈಗವಸು, ಮಾಸ್ಕ್ ಸೇರಿದಂತೆ ಅಗತ್ಯವಿರುವ ಸುರಕ್ಷತಾ ಕಿಟ್‌ಗಳನ್ನು ಕಡ್ಡಾಯವಾಗಿ ಬಳಸಬೇಕು. ಕೆಲಸದ ವೇಳೆ ಯಾವುದೇ ಆರೋಗ್ಯ ಸಮಸ್ಯೆ ಕಂಡುಬಂದರೆ ಅದನ್ನು ನಿರ್ಲಕ್ಷಿಸದೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು ಎಂದು ಸಲಹೆ ನೀಡಿದರು.

ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದರಿಂದ ಹಲವು ಕಾಯಿಲೆಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತದೆ. ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಮೂಲಕವೇ ಸಾರ್ವಜನಿಕರ ಆರೋಗ್ಯ ಸೇವೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯ ಎಂದರು.

ಸರ್ಕಾರಿ ಆಸ್ಪತ್ರೆ ಸೇವೆ ಸದುಪಯೋಗಪಡಿಸಿಕೊಳ್ಳಿ

ಸರ್ಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ರಾಘವೇಂದ್ರ ಮಾತನಾಡಿ, ಪೌರಕಾರ್ಮಿಕರು ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ವೈಯಕ್ತಿಕ ಸ್ವಚ್ಛತೆ, ಸುರಕ್ಷತಾ ಕ್ರಮಗಳು, ಪೌಷ್ಟಿಕ ಆಹಾರ ಹಾಗೂ ವಿವಿಧ ಕಾಯಿಲೆಗಳ ಮುನ್ನೆಚ್ಚರಿಕೆ ಕುರಿತು ಜಾಗೃತಿ ಹೊಂದುವುದು ಅಗತ್ಯವಾಗಿದೆ ಎಂದು ಹೇಳಿದರು.

ಪೌರಕಾರ್ಮಿಕರ ಆರೋಗ್ಯ ತಪಾಸಣೆಗೆ ಸರ್ಕಾರಿ ಆಸ್ಪತ್ರೆಯ ವೈದ್ಯರು ಸದಾ ಸಿದ್ಧರಿದ್ದು, ಲಭ್ಯವಿರುವ ಆರೋಗ್ಯ ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಮಿಕರ ಆರೋಗ್ಯಕ್ಕೆ ಆದ್ಯತೆ:

ಪಟ್ಟಣದ ಸ್ವಚ್ಛತೆ ಕಾಪಾಡುವ ಕಾರ್ಯದಲ್ಲಿ ಮುಂಚೂಣಿಯಲ್ಲಿರುವ ಪೌರಕಾರ್ಮಿಕರ ಆರೋಗ್ಯ ರಕ್ಷಣೆಗೆ ನಿಯಮಿತ ತಪಾಸಣೆ ಹಾಗೂ ಸುರಕ್ಷತಾ ಪರಿಕರಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ ಎಂಬ ಸಂದೇಶ ಶಿಬಿರದಲ್ಲಿ ವ್ಯಕ್ತವಾಯಿತು.



ಪೌರಕಾರ್ಮಿಕರಿಗೆ ಆರೋಗ್ಯ ಕಾಳಜಿ ಏಕೆ ಮುಖ್ಯ?

* ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು
* ಸುರಕ್ಷತಾ ಕಿಟ್‌ಗಳನ್ನು ಕಡ್ಡಾಯವಾಗಿ ಬಳಸಬೇಕು
* ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡಬೇಕು
* ಪೌಷ್ಟಿಕ ಆಹಾರ ಸೇವಿಸಬೇಕು
* ದುಶ್ಚಟಗಳಿಂದ ದೂರವಿರಬೇಕು
* ಆರೋಗ್ಯ ಸಮಸ್ಯೆ ಕಂಡುಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು

ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಕ ಪರಸಪ್ಪ, ರಾಜು, ಮಮತಾ, ನೇತ್ರಾವತಿ ಭರಮಪ್ಪ, ಪೌರಕಾರ್ಮಿಕರ ಸಂಘದ ಸೇರಿದಂತೆ ಇತರರು ಉಪಸ್ಥಿತರಿದ್ದರು. ತಾಲೂಕು ಅಧ್ಯಕ್ಷ ಚಿನ್ನಪ್ಪ, ಸಿಬ್ಬಂದಿಗಳಾದ

ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಜಗಳೂರು

ಸಿ.ಆರ್.ಮಿಸ್ ನಂ. 995/2026

ಅರ್ಜಿದಾರರು: 1) ನಾಗಪ್ಪ ಬಿನ್ ನಾಗಪ್ಪ, ವಯಸ್ಸು 80 ವರ್ಷ, ವಾಸ: ಉಜ್ಜಪ್ಪವಡೆಯರಹಳ್ಳಿ ಗ್ರಾಮ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ. 2) ನಾಗಮ್ಮ ಕೋಂ ರೇವಣ್ಣ, ವಯಸ್ಸು 78 ವರ್ಷ, ವಾಸ: ಆನಗೋಡು, ದಾವಣಗೆರೆ ತಾಲೂಕು, ದಾವಣಗೆರೆ ಜಿಲ್ಲೆ. 3) ಹನುಮಕ್